## ರಾಷ್ಟ್ರೀಯ ವೇದ ವಿಜ್ಞಾನ ಸಂಸ್ಥೆ ಟ್ರಸ್ಟ್ (ರಿ),

(ಯೋಗ ಸಂಸ್ಕೃತಂ ವಿಶ್ವವಿದ್ಯಾಲಯ ಫ್ಲೋರಿಡಾ ಅಮೇರಿಕಾ ಸಂಶೋಧನಾ ಕೇಂದ್ರ)
ಶ್ರೀಪಾದರಾಜ ಮಠ, ೫೮, ರಾಘವೇಂದ್ರ ಕಾಲನಿ, ಚಾಮರಾಜಪೇಟೆ, ಬೆಂಗಳೂರು.

# ಶ್ರೀ ಪ್ರಸನ್ನ ವೆಂಕಟದಾಸರ ಕೃತಿಗಳಲ್ಲಿ 'ಭಕ್ತಿಯ ಪರಾಕಾಷ್ಠತೆ"

(ಸಂಶೋಧನಾ ವಿಷಯದ ಮೇಲೆ ಸಂಕ್ಷಿಪ್ತ ಪ್ರಬಂಧ)

## ಶ್ರೀ ಗುರುರಾಜ. ಪ್ರಲ್ಹಾದರಾವ್ ಕುಲಕರ್ಣಿ

ಸಂಶೋಧಕರಾಗಿ

ಮಾರ್ಗದರ್ಶಕರು

**ಡಾ॥ ಕೃಷ್ಣ ಕೊಲ್ಹಾರಕುಲಕರ್ಣಿ**

ಮಹಿಪತಿ ೬೩೩, 'ಕೀರ್ತಿ ನಗರ, ಬಿಜಾಪೂರ – ೫೮೬೧೦೯.

ಸಹ – ಮಾರ್ಗದರ್ಶಕರು:

**ಡಾ॥ ಸುಭಾಸ ಕಾಖಂಡಕಿ**

ನಿರ್ದೇಶಕರು ಮತ್ತು ಸಂಶೋಧನಾ ಮಾರ್ಗದರ್ಶಕರು,
ಶ್ರೀ ಪ್ರಸನ್ನ ವೆಂಕಟ ಚಾರಿಟೇಬಲ್ ಟ್ರಸ್ಟ್,
ಬೆಂಗಳೂರು.

೨೦೧೪–೧೫

ಜಗತ್ತಿನಲ್ಲಿ ಮೂರು ವಿಧಧ ವಸ್ತುಗಳಿವೆ. ಜಡ–ಜೀವ ಮತ್ತು ಪರಮಾತ್ಮ. ಜಡ ವಸ್ತುಗಳಿಗೆ ಸಂವೇದನೆ ಇರುವುದಿಲ್ಲ. ಆದುದರಿಂದ ಅವು ಸುಖದು:ಖ ಅನುಭವವಾಗುವುದಿಲ್ಲ. ಪರಮಾತ್ಮನಾದರೋ ಸಕಲ ಗುಣ ಪರಿಪೂರ್ಣ ದೋಷದೂರನೂ ಆಗಿರುವನು. ಆದುದರಿಂದ ಅವನಿಗೆ ಸುಖದು:ಖಗಳ ಸಂಪರ್ಕವಿರುವುದಿಲ್ಲ. ಆದರೆ ಜೀವಿಗಳಲ್ಲಿ ಚೈತನ್ಯವಿರುವುದರಿಂದ ಅವರು ಸ್ಪಂದಿಸುತ್ತಾರೆ. ಈ ಕ್ರಿಯೆಯಿಂದ ಕರ್ಮ ಬಂಧನ ಉಂಟಾಗಿ ಅವುಗಳ ಫಲವಾಗಿ ಸುಖದು:ಖಗಳನ್ನು ಅನಿಭವಿಸುತ್ತಾರೆ. ಪುಣ್ಯಕಾರ್ಯಗಳಿಂದ ಸ್ವರ್ಗಾದಿ ಸುಖಗಳು ಸದ್ಗತಿಯೂ ಪಾಪಕಾರ್ಯಗಳಿಂದ ನರಕಾದಿ ಶಿಕ್ಷೆಯೂ ಅಸದ್ಗತಿಯೂ ಉಂಟಾಗುತ್ತದೆ. ಶಾಶ್ವತವಾದ ಸುಖವನ್ನು ಅನಂತವಾಗಿ ಅನುಭವಿಸಬೇಕೆಂಬುವುದೇ ಪ್ರತಿಯೊಂದು ಜೀವನ ಪರಮಗುರಿಯಾಗಿರುವುದು. ಈ ಬಗೆಯ ಶಾಶ್ವತವಾದ; ದು:ಖ ವರ್ಜಿತವಾದ; ಸುಖ ಜೀವರಿಗೆ ದೊರಕುವುದು. ಅಪರೋಕ್ಷದಲ್ಲಿ ಮಾತ್ರ ಅದು ಸಿಗಬೇಕಾದರೆ ಭಗವಂತನ ಅನುಗ್ರಹ ಬೇಕು ಈ ಅನುಗ್ರಹ ಸಂಪಾದನೆಗಾಗಿಯೇ ಪ್ರತಿಯೋಂದು ಜೀವಿಯು ಹಗಲಿರುಳು ಹಂಬಲಿಸುತ್ತಾನೆ. ಹಲವರು ಭಗವಂತನನ್ನು ಕರ್ಮಯೋಗದಿಂದ ಒಲಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಮತ್ತೇ ಕೆಲವರು ಜ್ಞಾನ ಯೋಗದಿಂದ ಒಲಿಸಿಕೊಳ್ಳಲು ಹೆಣಗಾಡುತ್ತಾರೆ. ಆದರೆ ಕಲಿಯುಗದಲ್ಲಿ ಭಗವಂತನ ಅನುಗ್ರಹ ಸಂಪಾದನೆಗೆ ಇರುವ ಸುಲಭವೂ ಸರಳವೂ ಆದ ಮಾರ್ಗವೆಂದರೆ ಭಕ್ತಿ ಮಾರ್ಗ.

ಅಂಥವುಗಳಲ್ಲಿ ಪುರಂದರದಾಸರು ಹರಿನಾಮದ ಭಕ್ತಿ ಬೀಜದ ವೃಕ್ಷವು ಫಲಿಸಿದ ಪರಿಯನ್ನು ಅವರ ಒಂದು ಪದ್ಯದಲ್ಲಿ ಬಹು ಸುಂದರವಾಗಿ ವರ್ಣಿಸಿದ್ದಾರೆ.

ನಾರಾಯಣನೆಂಬ ಭಕ್ತಿಯ ಬೀಜವನ್ನು ಧರೆಯೊಳಗೆ ಬಿತ್ತಿದವರು ನಾರದರು. ಅದು ಅಂಕುರಿಸಿದ್ದು ಧ್ರುವರಾಜನಿಂದ, ಮೊಳಕೆಯೊಡೆದದ್ದು ಪ್ರಲ್ಹಾದರಾಜರಿಂದ, ರುಕ್ಮಾಂಗದವರಿಂದ ಚಿಗುರಿ ಭೀಷ್ಮಾಚಾರ್ಯರಿಂದ ಹೂವು ಬಿಟ್ಟು, ದ್ರೌಪದಿಯಿಂದ ಕಾಯಿಬಿಟ್ಟು, ಗಜೇಂದ್ರನಿಂದ ಆ ಕಾಯಿ ಹಣ್ಣಾಗಿ ಶುಕಮುನಿಯಿಂದ ಪರಿಪಕ್ವವಾಗಿ, ಅಜಮಿಳ ಆ ಹಣ್ಣನ್ನು ಉಂಡು ಸವಿದನು, ಹೀಗೆ ಈ ರೂಪಕ ವಿಧಾನದಿಂದ ಈ ಹರಿಭಕ್ತಿ ಪಂಥ ಬೆಳೆದು ವಿಕಾಸಗೊಂಡಿದ್ದನ್ನು ಇಲ್ಲಿ ಕಾಣಬಹುದಾಗಿದೆ.

ಹರಿದಾಸ ಸಾಹಿತ್ಯದ ಪ್ರಮುಖ ತತ್ವ ಭಕ್ತಿ, ಮೂಲ ಸತ್ಯ ಶ್ರೀಹರಿ ದಾಸ ಶಬ್ದ ನಿರೂಪಿಸುವುದೇ ಒಡೆಯ ಮತ್ತು ದಾಸರ ಬಾಂಧವ್ಯವನ್ನು ಭಗವಂತನಿದ್ದರೆ ದಾಸ ಎಂಬ ಶಬ್ದಕ್ಕೆ ಆರ್ಥ ಅವನಿರದಿದ್ದರೆ ದಾಸ ಎಂಬ ಶಬ್ದಕ್ಕೆ ಅರ್ಥವೆ ಇಲ್ಲ. ಹರಿದಾಸರು ಭಕ್ತಿಯ ಹಾದಿಯಲ್ಲಿ ಭಗವಂತ, ಶ್ರೀಹರಿ ಎಂಬ ಮೂಲ ಸತ್ಯವನ್ನು ಹುಡುಕಲು ಹೊರಟಾಗ ಭಕ್ತಿಯ ಹಾದಿಗೆ ತಮ್ಮನ್ನಷ್ಟೆ ತೆರೆದುಕೊಳ್ಳಲಿಲ್ಲ ಅದನ್ನು ಇಡೀ ಮಾನವ ಕುಲಕ್ಕಾಗಿಯೇ ತೆರೆದಿಟ್ಟರು.

ಕರ್ನಾಟಕದಲ್ಲಿ ಈ ಭಕ್ತಿ ಮಾರ್ಗದ ಪ್ರವಾಹವು ಎರಡು ಹಂತಗಳಲ್ಲಿ ಬೆಳೆದು ಹರಿದುದ್ದನ್ನು ಕಾಣುತ್ತೇವೆ. ಪ್ರಾರಂಭದಲ್ಲಿ ವೈದಿಕ ಹಾಗೂ ಜೈನ ಧರ್ಮಗಳ ವಿರುದ್ಧವಾಗಿ ಎದ್ದು ನಿಂತ ಶಿವಶರಣರ ಕ್ರಾಂತಿಯ ಮೂಲ ಬೀಜ ಭಕ್ತಿಯದೇ ಆಗಿದ್ದಿತು. ಸಾಮಾಜಿಕ ಅಸಮಾನತೆಯ ವಿರುದ್ಧ ಬಂಡೆದ್ದ ಬಸವಣ್ಣ ಮತ್ತು ಅವರ ಅನುಯಾಯಿಗಳು ಧ್ವನಿ ಶತ ಶತಮಾನಗಳಿಂದ ಬಂದ ಅರ್ಥವಿಲ್ಲದ ಆಚಾರಗಳ ಅಂಧಾನುಕರಣೆಯ ವಿರುದ್ಧವಾಗಿತ್ತು. ಮತ್ತು ಅದು ಸರಳ ಭಾಷೆಯಲ್ಲಿತ್ತು. ಅಂತೆಯೇ ಅವರು ಬಹುಬೇಗ ಸಾಮಾನ್ಯ ಜನತೆಯ ಹತ್ತಿರ ಬರಲು ಕಾರಣವಾಯಿತು. ಅದರೆ ಬೇಗ ಕಣ್ಮರೆಯೂ ಆದರು. ಅದಕ್ಕೆ ಕಾರಣ ಬಹುಶಃ ಅವರ ವಿರೋಧವಿದ್ದದ್ದು. ಈ ನೆಲದಲ್ಲಿಯೇ ಹುಟ್ಟಿ ಬೆಳೆದ ಸಂಪ್ರದಾಯ ವಿಚಾರಗಳಾಗಿದ್ದುದು ಆಗಿರಬೇಕು.

ಎರಡನೇ ಹಂತದಲ್ಲಿ ಉಚ್ಚವರ್ಗದ ಬ್ರಾಹ್ಮಣರು. ಈ ಭಕ್ತಿ ಮಾರ್ಗದಲ್ಲಿ ಈಜಿದರು. ಬ್ರಾಹ್ಮಣರು ಈ ಆಂದೋಲನದಲ್ಲಿ ಅಧಿಕವಾಗಿದ್ದುದರಿಂದ ಬಹುಶಃ ಅದಕ್ಕೆ ಹರಿದಾಸ ಕೂಟ ಎಂಬ ಹೆಸರು ಬಂದಿರಬೇಕು. ಆದರೆ ಆಂದೋಲನವು ಬ್ರಾಹ್ಮಣರಿಗಷ್ಟೆ ಸೀಮಿತವಾಗಿರಲಿಲ್ಲ ಎಂಬುದನ್ನು ದಾಸರ ಕೃತಿಗಳಿಂದ ಅರಿಯಬಹುದಾಗಿದೆ.

ಅಂತೆಯೇ ಹರಿದಾಸ ಪಂಥವು ಮಧ್ವಾಚಾರ್ಯರಿಂದ ಪ್ರಾರಂಭವಾಯಿತೆಂದು ದಾಸಕೂಟದವರಲ್ಲಿ ನಂಬಿಕೆಯಿದೆ ದ್ವೈತಮತ ಪ್ರವರ್ತಕರಾದ ಮಧ್ವಾಚಾರ್ಯರು ಹನ್ನೆರಡನೇ ಶತಮಾತನ ಕಡೆಯ ಭಾಗದಲ್ಲಿದ್ದವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹುಟ್ಟಿ ಇಡೀ ದೇಶವನ್ನೆಲ್ಲ ಸುತ್ತಾಡಿ ಪ್ರಸ್ತಾನತ್ರಯಕ್ಕೆ ಭಾಷ್ಯ ಬರೆದು ದ್ವೈತವಾದವನ್ನು ಸಮರ್ಥಿಸಿದವರು. ಇವರ ರಚನೆಗಳೆಲ್ಲ ಸಂಸ್ಕೃತದಲ್ಲಿಯೇ ಇವೆ; ಶಾಸ್ತ್ರ ಸಾಹಿತ್ಯವೇ ಹೆಚ್ಚು ಆದರೆ ಅವರ ದ್ವಾದಶಸ್ತೋತ್ರ ಮಾತ್ರ ಗೇಯ ಗುಣ ಪ್ರಧಾನವಾದದ್ದು, ಅದನ್ನು ಕೀರ್ತನೆ ಪದ್ಧತಿಗೂ ನೃತ್ಯಕ್ಕೂ ಅಳವಡಿಸಿಕೊಂಡಿದ್ದಾರೆ. ಇಷ್ಟು ಮಾತ್ರದಿಂದಲೇ ಅವರು ಹರಿದಾಸ ಸಾಹಿತ್ಯದ ಮೊದಲಿಗರೆನ್ನುವದು ತಪ್ಪಾದೀತು ಅವರ ಕನ್ನಡದಲ್ಲಿ ದೇವರ ನಾಮ ರಚಿಸಿದರೆಂದು ಯಾವ ಪ್ರತೀತಿಯೂ ಇಲ್ಲ. ಅವರದೆನ್ನುವ ದೇವರ ನಾಮಗಳು ಯಾವವು ಉಪಲಬ್ದವಿಲ್ಲ.

ಆದರೆ ದಾಸ ಕೂಟದ ಮೇಲೆ ಅವರ ತಾತ್ವಿಕ ನಿಲುವಿನ ಪ್ರಭಾವವಿದ್ದಿತೆನ್ನುವದೇನೋ ನಿರ್ವಿವಾದ. ದೇವರು ಈಶ ಮನುಷ್ಯ ದಾಸ ಜಗತ್ತು ದಿಟ. ಸಂಸಾರ ಬರಿಯ ಭ್ರಮೆಯಲ್ಲ ಜೀವರಲ್ಲಿ ಭೇವಿದೆ ತಾರತಮ್ಯವಿದೆ, ನೈಜವಾದ ಸುಖಾನುಭವವೆ ಮುಕ್ತಿ. ಮುಕ್ತಿಗೆ ಭಕ್ತಿಯೇ ಸಾಧನ ಈ ಮಾಧ್ವ ಪ್ರಮೇಯಗಳನ್ನು ಹರಿದಾಸ ಸಾಹಿತ್ಯ ಒಪ್ಪಿಕೊಂಡು ವಿವರಿಸಿತು.

ಈ ಹರಿದಾಸ ಪಂಥದವರಲ್ಲಿ ಮಾಧ್ವಮತದ ದೀಕ್ಷೆ ಪ್ರಬಲವಾಗಿ ಕಾಣುವದುಂಟು. ಬಹುಮಟ್ಟಿಗೆ ಹರಿದಾಸರು ಮಾಧ್ವ ಸಂಪ್ರದಾಯಕ್ಕೆ ಸೇರಿದವರೇ. ಹರಿದಾಸ ಸಾಹಿತ್ಯದ ನಿಲುವು ವ್ಯಾಪಕವಾದದು. ಸರ್ವಜನಿತವಾದುದು. ಸರ್ವಸಮ್ಮತವಾದುದು. ಈ ಹರಿದಾಸರ ದೃಷ್ಟಿಯು ಮತಗಳನ್ನು ಮೀರಿ ನಿಲ್ಲುವಂಥದ್ದು. ಎಲ್ಲ ಮತಗಳಿಗೆ ಸರಿದೋರುವಂಥದ್ದು. ಮಾನವೀಯತೆಯನ್ನು ಹಿಡಿಯುವಂಥದ್ದು.

ಕನ್ನಡ ನಾಡಿನಲ್ಲಿ ಹರಿದಾಸ ಪಂಥ ಮೈದೆಳೆಯುವ ಕಾಲಕ್ಕೆ ದಕ್ಷಿಣ ಪ್ರದೇಶದಲ್ಲಿ ಭಕ್ತಿ ಮಾರ್ಗವನ್ನು ಆಳ್ವಾದರೂ ನಾಯನ್ಮಾರರೂ ವಿಶಿಷ್ಟಾದ್ವೈತಮತದ ಆಚಾರ್ಯರು ಬಸವಾದಿ ಶರಣರೂ ಜನರಿಗೆ ಬೋಧಿಸಿದ್ದರು. ಭಕ್ತಿಯು ಸರಳವಾದ ಮಾರ್ಗ ಸುಲಭವಾದ ಉಪಾಯ ಎನ್ನುವುದು. ಜನರಿಗೆ ಸ್ಪಷ್ಟವಾಗಿದ್ದಿತು. ಮಹಾರಾಷ್ಟ್ರದಲ್ಲಿ ಮಹಾನುಭಾವ ಪಂಥವು ಆಗಲೇ ಪ್ರಬಲವಾಗಿದ್ದಿತು. ಪಂಢರಪುರ ಪ್ರದೇಶದಲ್ಲಿ ವಿಠಲ ಭಕ್ತಿ ಬೇರು ಬಿಟ್ಟಿತ್ತು. ಪಂಢರಪುರದ ಪಾಂಡುರಂಗನಿಗೂ ಹರಿದಾಸರಿಗೂ ತೀರದ ನೆಂಟು ಮೊದಲಿನಿಂದಲೂ ಬಂದಿದೆ.

ಶಾಸ್ತ್ರವಿಚಾರದಲ್ಲಿ ಅಸಮಾನ್ಯರಾಗಿದ್ದು, ಸಂಸ್ಕೃತ ಗ್ರಂಥಗಳನ್ನು ರಚಿಸಿದ್ದು. ಅಂಥವರು ಕನ್ನಡದಲ್ಲಿ ಕೃತಿಗಳನ್ನು ರಿಚಿಸಿ ಹಾಡುವ ಪದ್ಧತಿಯನ್ನು ಕೈಹಿಡಿದು ನಡೆಸಿದರು. ಇವರಲ್ಲಿ ಮೊದಲನೆಯವರು ಶ್ರೀ ಮಧ್ವಾಚಾರ್ಯರ ಸಾಕ್ಷಾತ್ ಶಿಷ್ಯರಾಗರಾಗಿದ್ದ ನರಹರಿ ತೀರ್ಥರು. ಇವರು ಆಚಾರ್ಯ ಮಧ್ವರ ಪ್ರಭಾವಕ್ಕೆ ಒಳಗಾಗಿ ಅವರ ಶಿಷ್ಯರಾಗಿ ಸನ್ಯಾಸಿಗಳಾಗಿ ಕಳಿಂಗ ದೇಶದ ಆಡಳಿತವನ್ನು ನಡೆಸಿದರು. ಆ ಕಾಲಕ್ಕೆ ವೇದಾಂತಶಾಸ್ತ್ರದಲ್ಲಿ ಇಷ್ಟ ಪ್ರಸಿದ್ಧರಾದರು ಬೇರೊಬ್ಬರಿರಲಿಲ್ಲ. ಇಂಥವರು ಕನ್ನಡದಲ್ಲಿ ದೇವರ ನಾಮಗಳನ್ನು ರಚಿಸಿದರು. ಇವರು ಎಷ್ಟು ಕೃತಿಗಳನ್ನು ಮಾಡಿದರು. ಎಂಬುದು ತಿಳಿದು ಬಂದಿಲ್ಲ. ಒಂದೆರಡು ಕೃತಿಗಳೂ ಉಳಿದು ಬಂದಿವೆ. ಅವುಗಳು "ಎಂತುಮರುಳಾದೆ" ಮತ್ತು "ಹರಿಯೇ ಇದು ಸರಿಯೇ" ಇವೆರಡು ನರಹರಿ ಅಂಕಿತದಿಂದ ರಚಿತವಾಗಿವೆ ಎಂದು ಹೇಳಲಾಗುತ್ತಿದೆ.

ನರಹರಿ ತೀರ್ಥರಿಂದ ಕನ್ನಡದಲ್ಲಿ ಹರಿದಾಸ ಸಾಹಿತ್ಯ ಆರಂಭವಾಯಿತೆನ್ನಬಹುದಾದರೂ ಅವರು ದಾಸ ಕೂಟವನ್ನು ವ್ಯವಸ್ಥೆ ಮಾಡಿ ಪಂಥ ಪ್ರವರ್ತಕರಾದರು ಎನ್ನವುದು ಸಂದಿಗ್ಧ.

ಶ್ರೀ ಶ್ರೀಪಾದರಾಜರು ನರಹರಿ ತೀರ್ಥರ ಗುರುಗಳಾದ ಪದ್ಮನಾಭತೀರ್ಥರ ಪರಂಪರೆಯಲ್ಲಿ ಬಂದವರು ಮಠಾಧಿಪತಿಗಳು ಸ್ವರ್ಣವರ್ಣತೀರ್ಥರಿಂದ ಆಶ್ರಮ ಪಡೆದು ವಿಭುದೇಂದ್ರ ತೀರ್ಥರಿಂದ ಸಕಲ ವಿದ್ಯೆಯನ್ನು ಕಲಿತು ದೇಶದಲ್ಲೆಲ್ಲ ಸಂಚರಿಸಿ ಸಾಳ್ವ ನರಸಿಂಹರಾಜನಿಗೆ ರಾಜಗುರುಗಳಾಗಿ ಮುಳಬಾಗಿಲಿನಲ್ಲಿ ತಮ್ಮ ಮಠವನ್ನು ಕಟ್ಟಿಕೊಂಡು ಅಲ್ಲಿಯೇ ನರಸಿಂಹತೀರ್ಥದ ದಂಡೆಯ ಮೇಲೆ ವೃಂದಾವನ ಪ್ರವೇಶ ಮಾಡಿದರು. ಇವರು ವಿದ್ವತ್ ಪ್ರಪಂಚದಲ್ಲಿ ಸನ್ಮಾನ್ಯರು. ರಾಜಪೂಜಿತರು

ತಪಸ್ವಿಗಳೂ ಆಗಿದ್ದ ಶ್ರೀ ಶ್ರೀಪಾದರಾಜರು ತಿಳಿಗನ್ನಡದಲ್ಲಿ ರಂಗವಿಠಲ ಎಂಬ ಅಂಕಿತದಿಂದ ಹಲವಾರು ದೇವರ ನಾಮಗಳನ್ನು ಮತ್ತು ಭಕ್ತಿ ಪದ್ಯಗಳನ್ನು ರಚಿಸಿದ್ದಾರೆ. ಅವರ ಕನ್ನಡದ ಕೃತಿಗಳಲ್ಲಿ ಭ್ರಮರಗೀತೆ, ವೇಣುಗೀತೆ, ಗೋಪಿಗೀತೆಗಳು ಪ್ರಸಿದ್ಧವಾಗಿವೆ. ಭಾಗವತ ಸಪ್ತಮ ಸ್ಕಂದದಲ್ಲಿ ಬರುವ ನರಸಿಂಹ ಸ್ತವನವೆಂಬ ೫೬ ಶ್ಲೋಕಗಳನ್ನು ಸೊಗಸಾದ ಶೈಲಿಯಲ್ಲಿ ಲಕ್ಷ್ಮೀನರಸಿಂಹ ಪ್ರಾದುರ್ಭಾವ ದಂಡಕವೆಂದು ಕನ್ನಡೀಕರಿಸಿದ್ದಾರೆ.

ಇವರ ಕೃತಿಗಳಲ್ಲಿ ಪದ ಉಗಾಭೋಗ ಸುಳಾದ ವೃತ್ತನಾಮ ಗೀತೆ ದಂಡಕ ಈ ಪ್ರಕಾರಗಳಿವೆ ರಗಳೆಯಂತೆ ಒಂದೊಂದು ತಾಳದಲ್ಲಿದ್ದು. ಕೊನಗೆ ಜೊತೆಯೊಂದು ಇರುವುದು ಇವರ ಸುಳಾದಿಗಳಲ್ಲಿ ಕಾಣಬಹುದು. ಪದಕ್ಕೆ ಪಲ್ಲವಿ ಒಮ್ಮೊಮ್ಮೆ ಅನುಪಲ್ಲವಿ ಐದಾರು ನುಡಿಗಳಿರುತ್ತವೆ. ಕಡೆಯ ನುಡಿಯಲ್ಲಿ ಮಾತ್ರ ಅಂಕಿತವಿರುತ್ತದೆ. ಅದರಂತೆ ಒಂದೊಂದು ನುಡಿಯ ಸುಳಾದಿಗಳಲ್ಲಿ ಕೊನೆಯ ಸಾಲಿನಲ್ಲಿ ಅಂಕಿತವನ್ನು ಕಾಣುತ್ತೇವೆ. ಐದಾರು ಸಾಲುಗಳಲ್ಲಿ ಸರಳವಾದ ಕಾವ್ಯ ಪದ್ಧತಿಯಂತೆ ಒಂದೇ ಭಾಗವನ್ನು ನಿರೂಪಿಸುವ ಉಗಾಭೋಗಗಳು ಮನೋರವಾಗಿವೆ.

ಈ ಪ್ರಕಾರಗಳನ್ನು ಶ್ರೀ ಶ್ರೀಪಾದರಾಜರೆ ಪ್ರವರ್ತನೆ ಮಾಡಿದರೆಂದು ಪ್ರತೀತಿ ಇದೆ. ಮತ್ತು ಶ್ರೀಪಾದರಾಜರೆ ಶಾಸ್ತ್ರೀಯ ಸಂಗೀತವನ್ನು ಹರಿದಾಸ ಸಾಹಿತ್ಯಕ್ಕೆ ಅಳವಡಿಸಿದವರು ಅವರು ರಚನೆಗಳಿಂದ ಅವರಿಗಿದ್ದ ಅಗಾಧವಾದ ಸಂಗೀತ ಜ್ಞಾನ ಸ್ಪಷ್ಟವಾಗುತ್ತದೆ. ತಮ್ಮ ಕೃತಿಗಳನ್ನು ಪೂಜಾ ಕಾಲದಲ್ಲಿ ಹಾಡಿ ಹರಿದಾಸರಿಂದ ಹಾಡಿಸಿ ಕೀರ್ತನೆ ಪದ್ಧತಿಯನ್ನು ಬೆಳೆಸಿದರು. ಈ ಕೆಲಸಕ್ಕೆಂದು ಮಠದಲ್ಲಿ ಹಲವಾರು ಹರಿದಾಸರಿಗೆ ಆಶ್ರಯ ಕೊಟ್ಟರು. ಈ ಎಲ್ಲ ಕಾರಣಗಳಿಂದ ಶ್ರೀಪಾದರಾಜರನ್ನು ಹರಿದಾಸ ಪಂಥದ ಪ್ರವರ್ತಕರೆಂದು ಹೇಳಬಹುದು.

ಶ್ರೀ ಶ್ರೀಪಾದರಾಜರ ಮಾರ್ಗದರ್ಶನದಲ್ಲಿಯೇ ಅಡಿಯಟ್ಟ ಇವರ ಗೇಯ–ರಚನಾ ಪ್ರಕಾರಗಳಲ್ಲಿಯೇ ತಾವು ಕೃತಿಗಳನ್ನು ರಚಿಸಿ ಪದ್ಧತಿಗಳನ್ನು ಬಲಗೊಳಿಸಿ ಹರಿದಾಸ ಪಂಥವನ್ನು ಬೆಳೆಸಿದವರಲ್ಲಿ ವ್ಯಾಸತೀರ್ಥರು ಕೂಡಾ ಪ್ರಮುಖರು. ಈ ವ್ಯಾಸರಾಜರ ಶಿಷ್ಯರೆ ಶ್ರೀ ವಾದಿರಾಜರು, ಪುರಂದರದಾಸರು, ಕನಕದಾಸರು, ವೈಕುಂಠದಾಸರು.

ಪಂಡಿತರಿಗೆ ಹರಿದಾಸರ ಮೇಲೆ ಆಗ್ರಹವಿದ್ದಾಗ ಹರಿದಾಸರ ಪಕ್ಷವನ್ನು ಹಿಡಿದು ಅವರನ್ನು ಪ್ರೋತ್ಸಾಹಿಸಿದ ಕೀರ್ತಿ ಶ್ರೀ ವ್ಯಾಸತೀರ್ಥರಿಗೆ ಸಲ್ಲುತ್ತದೆ. ಅವರ ನೆರವಿಲ್ಲದಿದ್ದರೆ ಪುರಂದರ ದಾಸರೂ, ಕನಕದಾಸರೂ ಉಳಿಯುತ್ತಿದ್ದರೋ ಇಲ್ಲವೋ ಅವರ ಬಗ್ಗೆ ವಿರೋಧ ಅಷ್ಟು ಪ್ರಬಲವಾಗಿದ್ದಿತು. ಆಗ ವ್ಯಾಸ ತೀರ್ಥರು ತಮ್ಮ ಸನ್ನಧಿಯಲ್ಲಿಯೇ ದಾಸಕೂಟವನ್ನು ಸಲುಹಿದರು. ಅವರು ಕೃಷ್ಣ, ಶ್ರೀಕೃಷ್ಣ. ಸಿರಿ ಕೃಷ್ಣ ಎಂಬ ಅಂಕಿತವನ್ನು ಬಳಸಿದ್ದಾರೆ ಈ ವೈಕುಂಠದಾಸರ ನಂತರ ಬರುವವರೇ

ಮಹಿಪತಿದಾಸರು ಈ ಮಹಿಪತಿ ದಾಸರು ಶ್ರೀ ವಿಜಾಪೂರದ ಆದಿಲ್ ಶಾಹಿ ಆಡಳಿತದಲ್ಲಿದ್ದ ಖವಾಸ್‌ಖಾನನ ಬಳಿ ಕರುಣಿಕರಾಗಿದ್ದು. ಮುಂದೆ ಆದಿಲಶಾಹಿಯ ಪರಿಚಯವಾಗಿ ಅವನ ದರ್ಬಾರಿನಲ್ಲಿ ದಿವಾನರಾಗಿ ಕೆಲಸ ಮಾಡುತ್ತಿದ್ದರು. ಯೋಗದಿಂದ ಸಾಧನೆ ಮಾಡಿ ದಾಸರಾಗಿ ಕ್ರಾಂತಿಕಾರಿಗಳಾಗಿ ಅನೇಕ ಕೃತಿಗಳನ್ನು ಮಹಿಪತಿ ಅಂಕಿತದಿಂದ ರಚಿಸಿದರು.

ಇನ್ನು ಪ್ರಸನ್ನ ವೆಂಕಟದಾಸರು ಕ್ರಿ. ಶ. ೧೬೫೦–೧೭೨೦ ರವರೆಗೆ ಬಾಳಿ ಬದುಕಿದವರು ಆ ಕಾಲಕ್ಕೆ ಬಹು ದೊಡ್ಡ ಹೆಸರು. ಅವರ ಕೃತಿಗಳ ಭಾಷೆ, ಸಾಹಿತ್ಯ, ನಿರೂಪಣಾ ಶೈಲಿ ಮತ್ತು ಆಧ್ಯಾತ್ಮಿಕ ಸಾಧನೆಯ ದೃಷ್ಟಿಕೋನದಿಂದ ಬಹು ಮಹತ್ವದ್ದಾಗಿದೆ. ಕಾಖಂಡಕಿ ಮನೆತನದ ದಾಸರ ತಂದೆ ತಾಯಿ ನರಸಿಂಹಾಚಾರ್ಯ ಹಾಗೂ ಲಕ್ಷ್ಮೀಬಾಯಿ ದಂಪತಿಗಳು ಬಾಗಲಕೋಟೆಗೆ ಬಂದು ನೆಲೆಸಿದ್ದರು. ವೈದಿಕ ವೃತ್ತಿಯಿಂದ ಜೀವನ ನಡೆಸುತ್ತಿದ್ದರು.

ಇನ್ನು ಈ ಹರಿದಾಸ ಸಾಹಿತ್ಯದ ಮೇಲೆ ಎರಡು ಜನ ಸಂಶೋಧಕರಾದ ಡಾ. ಟಿ. ಎಸ್. ನಾಗರತ್ನ ಅವರ "ಹರಿದಾಸರ ಭಕ್ತಿಯ ಸ್ವರೂಪ" ಎಂಬ ಪ್ರಬಂಧದಲ್ಲಿ ಎಲ್ಲ ಹರಿದಾಸರುಗಳು ಕೃತಿಗಳಲ್ಲಿನ ಭಕ್ತಿಯ ಸ್ವರೂಪವನ್ನು ಅವರು ವಿಶ್ಲೇಷಿಸಿದ್ದಾರೆ. ಮತ್ತು ಡಾ. ಎ.ಟಿ. ಪಾಟೀಲರು ಅವರ ಸಂಶೋಧನಾ ಪ್ರಬಂಧದಲ್ಲಿ ಪ್ರಸನ್ನ ವೆಂಕಟದಾಸರು ಮತ್ತು ಅವರ ಕೃತಿಗಳು ಎಂಬ ವಿಷಯವನ್ನು ಸಂಶೋಧನಾ ಪದ್ಧತಿಯಲ್ಲಿ ವಿಶ್ಲೇಷಿಸಿದ್ದಾರೆ. ಆದರೆ ಭಕ್ತಿಯ ಬೆಳವಣಿಗೆ ಮತ್ತು ಕರ್ನಾಟಕ ಹರಿದಾಸರ ಭಕ್ತಿಯ ಸ್ವರೂಪಗಳನ್ನು ಹಿನ್ನೆಲೆಯಾಗಿ ಚರ್ಚಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಶ್ರೀ ಪ್ರಸನ್ನ ವೆಂಕಟದಾಸರ ಕೃತಿಗಳಲ್ಲಿ ಭಕ್ತಿಯ ಪರಾಕಾಷ್ಠತೆಯೆಂಬ ಶಿರೋನಾಮೆಯಲ್ಲಿ ಪ್ರಸನ್ನ ವೆಂಕಟದಾಸರ ಕೃತಿಗಳಲ್ಲಿ ಭಕ್ತಿಯ ಉದ್ರೇಕವನ್ನು ಸಮರ್ಪಣಾ ಭಾವವನ್ನು ಸಖ್ಯ ಭಾವವನ್ನು, ಆತ್ಮನಿವೇದನೆಯನ್ನು ನಿರೂಪಿಸುವ ಉದ್ದೇಶದಿಂದ ಈ ಸಂಶೋಧನೆಯನ್ನು ಕೈಗೊಳ್ಳಲಾಗಿದೆ.

ಈ ಪ್ರಸನ್ನ ವೆಂಕಟದಾಸರ ೫೬೫ ಕೃತಿಗಳಲ್ಲಿಯ ಕೆಲವು ಅತ್ಮ ನಿವೇದನೆ ಕುರಿತಾದ ಕೃತಿಗಳನ್ನು ಇಲ್ಲಿ ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ.

ಶ್ರೀ ಪ್ರಸನ್ನ ವೆಂಕಟದಾಸರು ಅಪರೋಕ್ಷ ಜ್ಞಾನವನ್ನು ಪಡೆಯಲು ತಮ್ಮ ಜೀವನವನ್ನು ಮೀಸಲಾಗಿಟ್ಟರು. ಮೊದಲು ತಾವು ನಂಬಿದ ಶ್ರೀನಿವಾಸನ ಎದುರು ತಮ್ಮ ಅಪರಾಧಗಳನ್ನು ಮತ್ತು ಸುಖ ದುಃಖಗಳನ್ನು ನಿವೇದಿಸಿಕೊಂಡು ತಾವು ಭಗವಂತನ ದಾಸರೆಂದು ತಮ್ಮನ್ನು ಅರ್ಪಿಸಿಕೊಳ್ಳಲು ಅವರು ಪ್ರಾರ್ಥಿಸಿದ್ದಾರೆ. ನಿರಂತರ ಭಗವನಂತನ ಕೈಂಕರ್ಯ ನಿರ್ವಹಿಸಿದ್ದಾರೆ.

ಭಗವಂತನಲ್ಲಿ ಸರ್ವಸ್ವವನ್ನು ಸಮರ್ಪಿಸಬೇಕು ಸುಖ ದುಃಖಗಳನ್ನು ಸರಿಸಮನಾಗಿ ಕಾಣಬೇಕು. ಸದಾಕಾಲ ಸಂತುಷ್ಟವಾಗಿರಬೇಕು. ಜಗಕ್ಕೆ ಯಾವ ಕೆಡಕನ್ನು ಮಾಡಬಾರದು. ಜನರಿಂದ ತಮಗಾಗುವ ಯಾವ ತೊಂದರೆಗಳನ್ನು ಲಕ್ಷಿಸಬಾರದು ನನ್ನಲ್ಲಿಯೇ ಅನುರಕ್ತರಾಗಬೇಕು ಅಂಥವರು ನನ್ನ ಭಕ್ತರು; ಅವರನ್ನು ನಾನು ತಕ್ಷಣ ಸಂಸಾರ ಸಾಗರದಿಂದ ಉದ್ಧಾರ ಮಾಡುತ್ತೇನೆ ಎಂದು ಶ್ರೀಕೃಷ್ಣ ಭಗವದ್ಗೀತೆಯಲ್ಲಿ ಹೇಳಿದಂತೆ. ಇದರಿಂದ ಭಗವಂತನಿಗೆ ತನ್ನ ಭಕ್ತರ ಬಗ್ಗೆ ಇರುವ ಮಮತೆ, ವಾತ್ಸಲ್ಯಗಳು ವ್ಯಕ್ತವಾಗುತ್ತದೆ. ಅದರಿಂದ ಭಗವಂತನನ್ನು ನಂಬಿದ ದಾಸರು ತಮ್ಮ ಸರ್ವಸ್ವವನ್ನು ಆತನಿಗೆ ಅರ್ಪಿಸಿದರು.

ಶ್ರವಣಂ ಕೀರ್ತನಂ. ವಿಷ್ಣೋಃ ಸ್ಮರಣಂ ಪಾದಸೇವನಂ.<br>
ಅರ್ಚನಂ ವಂದನಂ ದಾಸ್ಯಂ ಸಖ್ಯಂ. ಆತ್ಮ ನಿವೇದನಂ.<br>
ಇತಿ ಪುಂಸಾರ್ಪಿತಾ. ವಿಷ್ಣೌ ಭಕ್ತಿ ಶ್ವೇನ್ನವಲಕ್ಷಣಾ.<br>
ಕ್ರಿಯತೆ ಭಗವತ್ಯದ್ಧಾತನ್ಮನ್ಯೇಧೀತಮುತ್ತಮಂ.

ಎಂಬುದು ಭಾಗವತದ ಉಕ್ತಿ ಇದನ್ನೇ ಒಂಬತ್ತು ವಿಧದ ಭಕ್ತಿ ಮಾರ್ಗಗಳೆಂದು ಕರೆಯಲಾಗುತ್ತದೆ. ಸಂಸ್ಕೃತದ ಇನ್ನೊಂದು ಉಕ್ತಿಯಂತೆ ಈ ನವವಿಧ ಮಾರ್ಗಗಳನ್ನು ಅನುಸಿರಿಸಿ ಕೃತ್ಯರಾದ ಭಕ್ತರನ್ನು ನಾವು ಇಲ್ಲಿ ಕಾಣಬಹುದಾಗಿದೆ. ಶ್ರವಣದಿಂದ ಪರಿಕ್ಷೀತರಾಜನು, ಕೀರ್ತನೆಯಿಂದ ನಾರದರು, ಸ್ಮರಣೆಯಿಂದ ಪ್ರಲ್ಹಾದ, ಪಾದಸೇವನೆಯಿಂದ ಲಕ್ಷ್ಮೀದೇವಿ, ಪೂಜೆಯಿಂದ ಪೃಥು ಮಹಾರಾಜ, ಅಭಿನಂದನೆಯಿಂದ ಅಕ್ರೂರ, ದಾಸ್ಯದಿಂದ ಹನುಮಂತ, ಸಖ್ಯದಿಂದ ಅರ್ಜುನ, ಆತ್ಮ ನಿವೇದನೆಯಿಂದ ಸರ್ವಾರ್ಪಣದಿಂದ, ಬಲಿ ಚಕ್ರವರ್ತಿ ಹೀಗೆ ಇವರೆಲ್ಲರೂ ನವ ವಿಧ ಭಕ್ತಿ ಮಾರ್ಗಗಳಿಂದ ಒಂದೇ ತೆರನಾದ ಮುಕ್ತಿಯನ್ನು ಪಡೆದರೆಂದು ಹೇಳಲಾಗುತ್ತದೆ. ಅಂದರೆ ಇವುಗಳೆಲ್ಲವೂ ಭಗವಂತನನ್ನು ಒಲಿಸಿಕೊಳ್ಳಲು ಪ್ರತ್ಯೇಕ ಮಾರ್ಗಗಳೆಂದು ಹೇಳಿದಂತಾಯಿತು.

ಆದರೆ ನವವಿಧ ಭಕ್ತಿಗಳ ಮೇಲೆ ಹಲವಾರು ವಿದ್ವಾಂಸರು ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. ಒಬ್ಬ ವಿದ್ವಾಂಸರು ಈ ನವವಿಧ ಭಕ್ತಿಗಳಲ್ಲಿ ಮೊದಲ ಆರು ಅಂಶಗಳು ಸಾಧನ ಭಾಗವೆಂದು ಉಳಿದ ಮೂರು ಅಂಶಗಳು ಭಕ್ತಿ ಭಾವಗಳೆಂದು ಹೇಳಿದ್ದಾರೆ.

ದಾಸ್ಯ ಸಖ್ಯ ಮತ್ತು ಆತ್ಮ ನಿವೇದನೆಗಳು ಭಕ್ತಿಯ ಭಾವಗಳು ಅವುಗಳು ಸಾಧಕನ ಪ್ರಾರಂಭದ ಹಂತಗಳೆಂದರೆ, ಕ್ರಮ ಕ್ರಮವಾಗಿ ಬೆಳೆಯತೊಡಗಿದರೂ ಸಾಧಕನ ಜೀವನದ ಪರಿಪಕ್ವ ದಿಸೆಯಲ್ಲಿ ಮಾತ್ರವೇ ಬಲವಾಗಿ ಬೇರೂರಿ ವೈಶಿಷ್ಟ್ಯ ಪೂರ್ಣವಾಗಿ ರೂಪಗೊಳ್ಳುತ್ತವೆ. ಎಂಬುದು ಇನ್ನೊಂದು

ಅಭಿಪ್ರಾಯ ನವವಿಧ ಭಕ್ತಿ ಮಾರ್ಗದಲ್ಲಿ ಶ್ರವಣ ಕೀರ್ತನೆ ಸ್ಮರಣ ಎಂಬುದು ಧ್ಯಾನಕ್ಕೂ ಪಾದಸೇವನೆ, ಅರ್ಚನ ಮತ್ತು ವಂದನ ಎಂಬುದು ಭಗವತ್ಪ್ರೀತ್ಯರ್ಥವಾಗಿ ಮಾಡುವ ಕ್ರಿಯೇಗಳು; ದಾಸ ಸಖ್ಯ ಮತ್ತು ಆತ್ಮನಿವೇದನೆ ಎಂಬುದು ಶೇಷಭಾವ ಮತ್ತು ಶರಣಾಗತಿಗೂ ಅನ್ವಯಿಸುವವು ಎಂಬುದಾಗಿ ಮತ್ತೊಬ್ಬರು ಹೇಳುತ್ತಾರೆ.

ನವವಿಧ ಭಕ್ತಿಗಳನ್ನು ಮೆಟ್ಟಿಲುಗಳನ್ನಾಗಿ ಪರಿಗಣಿಸಬಹುದೇ ಅಥವಾ ಅವುಗಳಲ್ಲಿ ಒಂದೊಂದು ಪ್ರತ್ಯೇಕವಾದವುಗಳೇ ಎಂಬ ಸಂದೇಹವು ವಿದ್ವಂಸರಲ್ಲಿ ಬರಬಹುದು, ಹಾಗೆ ನೋಡಿದರೆ ಪ್ರತಿಯೊಂದು ಪ್ರತ್ಯೇಕವಾದ ಮಾರ್ಗದೆಂದು ಆಯಾ ಸಾಧನೆಗಳ ಮೂಲಕ ಭಗವಂತನ ಅನುಗ್ರಹಕ್ಕೆ ಪಾತ್ರರಾದವರ ಈ ಮೋದಲೆ ನಮೂದಿಸಲಾಗಿದೆ.

ಭಕ್ತಿಗಳಲ್ಲಿ ಕೊನೆಯದಾಗಿ ಬರುವ ಆತ್ಮನಿವೇದನೆಯ ಅತ್ಯಂತ ಶ್ರೇಷ್ಟವಾದುದೆಂದು ಗಣಿಸಿದರೆ, ಉಳಿದವುಗಳು ಈ ಹಂತಕ್ಕೆ ಬರಲು ಒಂದೊಂದು ಹಂತವೆಂದು ಭಾವಿಸಬಹುದು. ಸಾಮಾನ್ಯ ಭಕ್ತನೊಬ್ಬನು ದೇವರ ಕಿರ್ತನೆಯ ಶ್ರವಣದಿಂದ ಆಕರ್ಷಿತನಾಗಿ ಆತನ ನಾಮ ಸಂಕಿರ್ತನೆಯಲ್ಲಿ ತೊಡಗಿ ಭಗವಂತನ ಸ್ಮರಣೆಯಿಂದ ಸರ್ವದಾ ಸಂತೃಪ್ತನಾಗಿ ತನ್ನ ಇಷ್ಟದೇವತೆಯ ಪಾದಸೇವನೆ ಅರ್ಚನೆ ಮತ್ತು ವಂದನೆಗಳ ಮೂಲಕ ಭಗವಂತನ ದಾಸ್ಯವನ್ನು ಕೈಗೊಂಡು ಪರಮಾತ್ಮನಲ್ಲಿ ಸಖ್ಯವನ್ನು ಬೆಳೆಸಿ ಕಡೆಗೆ ಆತ್ಮನಿವೇದನೆಯಿಂದ ಸರ್ವ ಸಮರ್ಪಣದಿಂದ ಸಿದ್ದಿಯನ್ನು ಪಡೆಯಬಹುದು ಎಂಬ ಕೆಲವರ ಅಭಿಪ್ರಾಯವು ಇದೆ. ಶ್ರೀ ಪ್ರಸನ್ನ ವೆಂಕಟದಾಸರು ನವವಿಧ ಭಕುತಿಯ ಕುರಿತು ತಮ್ಮ ಅನೇಕ ಕಿರ್ತನೆಗಳಲ್ಲಿ ಇದನ್ನೇ ನಿರೂಪಿಸಿದ್ದಾರೆ.

ಅವರ ಒಂದು ಊಗಾಭೋಗವನ್ನು ನೋಡೋಣ
ಹೆರಿಗೆ ತನ್ನಾತ್ಮ ನಿವೇದನದಿಂದಾ
ಉರಿಜಲ ಮಣ್ಣು, ಗಾಳಿ ಹೊಂದಾ
ಸ್ವರೂಪನೆ ಹರಿಯಂಘ್ರಿ ಗರ್ಪಿಸಿ ನಿಂದಾ
ಹರುಷನುಂಬ ಉನ್ನಾಹದಿಂದಾ
ಪರಸನ್ನ ವೆಂಕಟಪತಿ ಭಕ್ತಿಯಿಂದಾ
ಸುರ ಋಷಿ ನರರಿಗೆಲ್ಲ ನಿಜಾನಂದ

---

೧) ಪ್ರಸನ್ನ ವೆಂಕಟದಾಸರ ಸಮಗ್ರ ಕೀರ್ತನೆಗಳು ಸಂಪುಟ–೨ ಪುಟ ಸಂ ೧೬೩, ಕೃ.ಸಂ. ೧೪೪ (೧೪೫)

ಶ್ರೀ ಪ್ರಸನ್ನ ವೆಂಕಟದಾಸರ ಸಮಗ್ರ ಕಿರ್ತನೆಗಳ

ಈ ಉಗಾಭೋಗದಲ್ಲಿ

ಶ್ರೀ ಮದಾಚಾರ್ಯರ ಸರ್ವಮೂಲ ಗ್ರಂಥಗಳಲ್ಲಿ ನಿರೂಪಿತವಾದ ಪ್ರಮೇಯಗಳನ್ನು ದಾಸ ಸಾಹಿತ್ಯದಲ್ಲಿ ಕಾಣುತ್ತವೆ. ಆಚಾರ್ಯರ ಗ್ರಂಥಗಳಲ್ಲಿ ಉಕ್ತವಾದ ಪ್ರಮೇಯಗಳನ್ನು ತಿಳಿಸುವಲ್ಲಿ ಹೊಸ ಆಯಾಮವನ್ನು ನೀಡಿದ್ದಾರೆ.

ಉದಾಹರಣೆಗೆ ನವ ವಿಧ ಭಕ್ತಿಯ ವಿಷಯದಲ್ಲಿ ಒಂದೊಂದು ಭಕ್ತಿಗೂ ಪ್ರತ್ಯೇಕವಾದ ಪದ್ಯಗಳನ್ನು ಪ್ರತ್ಯೇಕವಾದ ಉಗಾಭೋಗ ಶ್ರೀ ಪ್ರಸನ್ನ ವೆಂಕಟದಾಸರು ನಮಗೆ ರಚಿಸಿ ಕಟ್ಟಿದ್ದಾರೆ.

ಭಾಗವತದಲ್ಲಿ ಉಕ್ತವಾದ ನವವಿಧ ಭಕ್ತಿಯಲ್ಲಿ ಕೊನೆಯದಾದ ಆತ್ಮನಿವೇದನೆ ವಿಷಯದಲ್ಲಿ ಕೆಲವರ ಅಭಿಪ್ರಾಯದ ಪ್ರಕಾರ ಆತ್ಮನಿವೇದನೆ ಎಂದರೆ ಆತ್ಮ ಸಮರ್ಪಣೆ ಸ್ವ ಶರೀರ ಸಮರ್ಪಣೆ ಎಂದು ಮಾತ್ರ ಹೇಳುತ್ತಾರೆ. ಆದರೆ ಇನ್ನೂ ಶ್ರೀ ಮದ್ವಾಚಾರ್ಯರು ಮಾತ್ರ ಆತ್ಮ ನಿವೇದನೆ ವಿಷಯದಲ್ಲಿ ಬ್ರಹ್ಮ ತರ್ಕದ ಪ್ರಮಾಣವನ್ನು ಉದಾಹರಿಸುತ್ತ

ಆತ್ಮ ಸ್ಥತ್ವೇನ ವೇದನಮಾತ್ಮ ನಿವೇದನಂ
ಮುಕ್ತಸ್ಯಾಪಿ ಮಮಾಂತ:ಸ್ಥೋ ನಿಯಂತ್ಯೆದ ಹರಿ:ಸದಾ
ಇತಿ ಜ್ಞಾನಂ ಸಮುದ್ದಿಷ್ಟಂ ಸಮ್ಯಯಗಾತ್ಮ ನಿವೇದನಂ ಇತಿ ಚ॥

ಆಚಾರ್ಯರ ಈ ವಚನದಂತೆ ಭಗವಂತ ನನ್ನನೊಳಾಗೆ ಸದಾ ನಿಯಾಮಕನಾಗಿ ರಕ್ಷಕನಾಗಿ ಇರುತ್ತಾನೆ ಎಂದು ತಿಳಿಯುವುದು. ಆತ್ಮ ನಿವೇದನೆ ಜೊತೆಗೆ ನಾನು ಮುಕ್ತ ನಾದಾಗಲೂ ಭಗವಂತ ನನ್ನೊಳಗಿದ್ದು. ನಿಯಮನ ಮಾಡುತ್ತಲೆ ಇರುತ್ತಾನೆ ಎನ್ನುವ ಯತಾರ್ಥ ಜ್ಞಾನವೇ ಆತ್ಮ ನಿವೇದನೆ ಎಂದು ಕರೆದು ಶ್ರೀಹರಿಯಲ್ಲಿ ಭಕ್ತಿಯನ್ನು ಮಾಡುವ ಒಂದು ಕ್ರಮವನ್ನು ಹೇಳಿದ್ದಾರೆ. ಆ ಕ್ರಮಗಳು ಹೀಗಿದೆ.

೧) ಶ್ರವಣಂ ೨) ಕೀರ್ತನಂ ೩) ಸ್ಮರಣೆ ೪) ಪಾದನೇವನಂ ೫) ಅರ್ಚನಂ ೬) ವಂದನಂ ೭) ಉಪಾಸನೆ (ದಾಸ್ಯ) ೮) ಸಖ್ಯ ೯) ಆತ್ಮನಿವೇದನೆ

ಆದ್ದರಿಂದ ಇವು ಭಕ್ತಿಯ ಒಂಭತ್ತು ಸೋಪಾನಗಳೆಂದು ಹೇಳಬಹುದು ಯಾರೇ ಆಗಲಿ ಹರಿಭಕ್ತನಾಗಬೇಕೆಂದು ಮನಸ್ಸು ಮಾಡಿದರೆ ಮೊಟ್ಟ ಮೊದಲ ಹೆಜ್ಜೆ ಶ್ರವಣದಿಂದಲೆ ಪ್ರಾರಭವಾಗಿ ಆತ್ಮ

---

೧) ಸರ್ವಮೂಲ ಗ್ರಂ:ಥಗಳ ಶ್ರೀ ಮದ್ಭಾಗವತ ತಾತ್ಪರ್ಯ ನಿರ್ಣಯ ಭಾಗ ೫ ಪುಟ ಸಂ ೪೧೬, ೪೧೭ ಸಪ್ತಮ ಸ್ಕಂದ, ಅಧ್ಯಾಯ ೫, ಶ್ಲೋಕ ೨೭.

ನಿವೇದನೆಯಿಂದ ಮುಕ್ತಾಯವಾದಲ್ಲಿ ಅವರಿಗೆ ಶ್ರೀಹರಿಯ ಕರುಣಾ ಪ್ರಸಾದ ಪ್ರಾಪ್ತವಾಗಿ ಮುಕ್ತಿಯನ್ನು ಪಡೆಯಬಹುದೆಂದು ಎಲ್ಲ ಹರಿದಾಸರು ತಿಳಿಯಪಡಿಸಿದ್ದಾರೆ.

ಇನ್ನು ಈ ಪ್ರಸನ್ನ ವೆಂಕಟದಾಸ ನವವಿಧ ಭಕ್ತಿಯ ಕುರಿತಾದ ಕೀರ್ತನೆಗಳನ್ನು ವಿಶ್ಲೇಷಿಸೋಣ.

ಹರಿಕಥಾಶ್ರವಣ. ಸಾಧಿಸದೆ ಮುಕುತಿ ಇದಕೆ
ಸರಿಧಮವಿಲ್ಲೆಂದು ಪೇಳ್ವವು ಶೃತಿತತಿ
ಶ್ರವಣದಿಂದ ಸಕಲ ಸದ್ಧರ್ಮಾ ಸಾಧನವು
ಭುವಿಯಲ್ಲಿ ಪೂಜ್ಯರಾಹೋರು ಸುಜನರು
ಸವೆಯದಾನಂದಮಯ. ಭಕುತಿಸಿರಿ ದೊರಕುವುದು.
ಅವರೇವ ಸಜ್ಞರ್‍ಾಗ್ವರು ಹರಿಯ ದಯದಿ.

ಈ ಪದ್ಯದಲ್ಲಿ ದಾಸರು ಹರಿಕಥೆಯನ್ನು ಕೇಳುವವರಿಂದಲೇ ಅನೇಕರು ಮೋಕ್ಷವನ್ನು ಪಡೆದಿದ್ದಾರೆಂದು ದೃಷ್ಟಾಂತ ಸಹಿತ ಶ್ರತಿಗಳ ಆಧಾರ ಕೊಟ್ಟು ವಿವರಿಸಿದ್ದಾರೆ. ಮುಖ್ಯವಾಗಿ ಪರೀಕ್ಷಿತ ರಾಜನ ಕಥೆಯೇ ನಮಗೆ ಪ್ರಾಧಾನ್ಯವಾದುದು. ಪರಿಕ್ಷಿತ ರಾಜನಿಗೆ ಋಷಿಕುಮಾರನಿಂದ ಶಾಪವಾಗಿ ಆಯುಷ್ಯ ಇನ್ನು ಕೇವಲ ಏಳು ದಿನ ಮಾತ್ರ ಎಂದು ತಿಳಿದಾಗ ಅವನು ಮರಣ ಕಾಲದಲಿ ಶುಕಾಚಾರ್ಯರೆಂಬ ಮಹಾನುಭಾವರಿಂದ ಭಾಗವತ ಈ ಶ್ರವಣ ಮಾಡಿದ ಈ ರೀತಿಯಲ್ಲಿ ಪ್ರಮಿತವಾದ ಪ್ರಮೇಯವನ್ನು ಶ್ರೀ ಪ್ರಸನ್ನ ವೆಂಕಟದಾಸರು ಬಹು ಸುಂದರವಾಗಿ ನಿರುಪಿಸುತ್ತಾ,

ನಮ್ಮ ದೇಹದಲ್ಲಿ ಪಂಚಭೂತಗಳಿಂದ ಆಗುವ ಸತ್ಕರ್ಮಗಳನ್ನು ಪರಮಾತ್ಮನ ಪಾದಗಳಿಗೆ ಅರ್ಪಿಸುತ್ತಾ ಪರಮಾತ್ಮ ನಿಂದಾ ಸ್ತುತಿಗಳನ್ನು ಸಹಿತ ನಿರ್ವಿಕಾರವಾಗಿ ಸ್ವೀಕರಿಸುತ್ತಾನೆ. ಮತ್ತು ಶ್ರೀ ಪ್ರಸನ್ನ ವೆಂಕಟಪತಿಯನ್ನು ಭಕ್ತಿಯಿಂದ ಭಜಿಸುವ ಸುರ ಋಷಿ ನರರಿಗೆಲ್ಲ ನಿಜಾನಂದ ಎಂದರೆ ಮೋಕ್ಷದಲ್ಲಿಯೂ ಪರಮಾತ್ಮನೆ ನಿಯಾಮಕ ಎನ್ನುವ ಜ್ಞಾನವನ್ನು ಕೊಡುತ್ತಾನೆ.

ಒಂಭತ್ತು ಸಂಖ್ಯೆಗೆ ಒಂದು ವಿಶಿಷ್ಟ ಸ್ಥಾನವಿದೆಯೆಂದು ಹೇಳಿದರೆ ತಪ್ಪಾಗದು. ಒಂಭತ್ತರ ಮಗ್ಗಿಯ ಎರಡು ಸಂಖ್ಯೆಗಳನ್ನು ಕೂಡಿಸಿದರೆ ಪುನಃ ಒಂಭತ್ತೇ ಆಗುತ್ತದೆ. ಈ ವಿಷಯ ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಮತ್ತೆ ಕೆಲವು ಕಡೆ ಒಂಭತ್ತರ ಸ್ಥಾನ ಹೀಗೆ: ನವವೃಂದಾವನಗಳು, ನವರಾತ್ರಿ, ನವರತ್ನ, ನವಕೋಟಿ, ನವಮಾಸ, ನವಧಾನ್ಯಗಳು, ನವಗ್ರಹಗಳು, ಅದರಂತೆ ಭಕ್ತಿಯಲ್ಲೂ ಕೂಡ ಒಂಭತ್ತು ಸಂಖ್ಯೆ ತನ್ನ ಸ್ಥಾನ ಉಳಿಸಿಕೊಂಡು ಬಂದಿದೆ. ನಾರದರ ಭಕ್ತಿ ಸೂತ್ರದಲ್ಲಿ ಮತ್ತು ಭಾಗವತದಲ್ಲಿ ಒಂಭತ್ತು ಪ್ರಕಾರದ ಭಕ್ತಿಯನ್ನು ಹೇಳಿದ್ದಾರೆ.

ಅದನ್ನು ನವವಿಧಭಕ್ತಿ ಭಕ್ತಿಯಿಂದ ಭಾಗವತವನ್ನು ಶ್ರವಣ ಮಾಡಿ ಪರೀಕ್ಷಿತನಾದನು ಮುಕ್ತಿ ಹೊಂದಿದನೆಂದು ದಾಸರು ಒತ್ತು ಕೊಟ್ಟು ಹೇಳಿದ್ದಾರೆ. ಭಗದ್ಭಕ್ತನಾದ ಪ್ರಲ್ಹಾದನು ತಾಯಿಯ ಗರ್ಭದಲ್ಲೆ ನಾರದರಿಂದ ಭಾಗವತ ಧರ್ಮ ಶ್ರೀಹರಿಯ ಮಹಿಮೆಯನ್ನು ಶ್ರವಣ ಮಾಡಿದ್ದರಿಂದ ಬಾಲ್ಯದಲ್ಲಿಯೆ ತನ್ನ ಜೊತೆಯಲ್ಲಿರುವ ದೈತ್ಯ ಬಾಲಕರಿಗೆ ಧರ್ಮೋಪದೇಶ ಮಾಡುವಂಥ ಯೋಗ್ಯತೆ ಅವನಲ್ಲಿತ್ತು. ಮುಂದೆ ತನ್ನ ತಂದೆಯ ಉದ್ಧಾರವನ್ನು ಮಾಡಿದನು. ಹೀಗೆ ಹರಿ ಕಥೆಯ ಮಹಿಮೆ ಕೇಳಿದವರಿಗೆ ಅನೇಕ ದೃಷ್ಟಾಂತಗಳು ಭಾಗವತದಲ್ಲಿ ದೊರೆಯುತ್ತಿವೆ. ಕೊನೆಗೆ ಪ್ರಸನ್ನ ವೆಂಕಟದಾಸರರು ಹರಿಕಥಾ ಶ್ರವಣ ಮಾಡಿದವರಿಗೆ ಮೋಕ್ಷವು ಕೂಡಾ ಬೇಗನೆ ದೊರಕುವುದು ಎಂದು ಘಂಟಾ ಘೋಷವಾಗಿ ಈ ಪದ್ಯದಲ್ಲಿ ಹೇಳಿದ್ದಾರೆ. ಅದರಿಂದ ಮೊದಲನೇ ಪಾವಟಿಗೆಯಾದ ಶ್ರವಣ ಭಕ್ತಿಯಲ್ಲಿ ಯಶಸ್ವಿಯಾದರೆ ಮುಂದಿನ ಎಂಟು ಪಾವಟಿಗೆಗಳು ಸುಲಭವಾಗಿ ಸಿಕ್ಕುವವು.

ಇನ್ನು ಕೀರ್ತನೆ ಭಕ್ತಿ:

ಶ್ರೀ ವಿಷ್ಣು ಮಹಿಮೆ ಸಂಕೀರ್ತನೆ ಸರ್ವ  
ದಾ ವಿಸ್ಮೃತಿಯ ನೀಗಿ ಮಾಡಿ ವೈಷ್ಣವರು  
ಪುಣ್ಯ ಮಾರ್ಗವನರಿಯದ ಮೂಢರಿಗೆ  
ಉನ್ನತ ಕುಟಿಲ ಪಾಮರ ಮನುಜರಿಗೆ.  
ಘನ್ನ ಸಾಧನವಿದೆ ಮತ್ತೊಂದು ಕಾಣೆ.  
ಪುಣ್ಯಶ್ಲೋಕನ ವಾರ್ತೆ ಕೀರ್ತನೆಯ ಪಠನೆ.

ಇನ್ನು ಭಕ್ತಿಯ ಎರಡನೇ ಮೆಟ್ಟಿಲವಾದ ಕೀರ್ತನೆ ಬಗ್ಗೆ ವಿಚಾರ ಭಗವಂತನ ಮಹಿಮೆ. ಅವನ ಅನಂತ ಗುಣಗಳ ಮಹಿಮೆಯ ಚಿಂತನೆ ಮಾಡುತ್ತ ಅವನ ಕೀರ್ತನೆಗಳನ್ನು ದಾಸರು ಮಾಡಿದ್ದಾರೆ. ಕಲಿಯುಗದಲ್ಲಿಯಂತೂ ಹರಿ ಕೀರ್ತನೆಗೆ ವಿಶೇಷ ಫಲ ಉಂಟೆಂದು ಶ್ರೀ ಶ್ರೀಪಾದರಾಜಾದಿ ಅನೇಕ ಯತಿಗಳು ಹಾಗು ಅನೇಕ ಜನದಾಸರು ಬಹು ಸುಂದರವಾಗಿ ವರ್ಣಿಸಿದ್ದಾರೆ. ಧರ್ಮ ಮಾರ್ಗವನ್ನು ಅರಿಯದ ಮೂಢರೂ ಕೂಡ ಹರಿ ಕೀರ್ತನೆ ಮಾಡಿ ಉಧೃತರಾಗಬಹುದೆಂಬ ಪ್ರಸನ್ನ ವೆಂಕಟದಾಸರು ತಮ್ಮ ಈ ಪದ್ಯದಲ್ಲಿ ತಿಳಿಸಿದ್ದಾರೆ. ಇನ್ನು ಜ್ಞಾನಿಗಳಿಗೆ ಕೀರ್ತನೆಯಿಂದ ಸತ್ಫಲವು ಸಿಗುವುದೆಂದು ಕೂಡಾ ತಿಳಿಸಿದ್ದಾರೆ.

---

ಶ್ರೀ ಪಸನ್ನ ವೆಂಕಟದಾಸರ ಸಮಗ್ರ ಕೀರ್ತನೆಗಳು ಸಂಪುಟ ೨, ಪುಟ ಸಂ. ೧೫೧ ಹಾಡು ೧೩೬ (೪೦೭)

ಭಕ್ತಿಯಿಂದ ಪರಮಾತ್ಮನ ಕೀರ್ತನೆ ಮಾಡುವವರಿಗೆ ಸ್ವಪ್ನಾದಿಗಳು ಕೂಡ ಕಾಣಿಸುವುದಿಲ್ಲವೆಂದು ದಾಸರು ತಿಳಿಸಿದ್ದಾರೆ.

ಈ ಪದ್ಯದಲ್ಲಿ ಕೆಲವು ಭಗವದ್ಭಕ್ತರು ಹರಿನಾಮ ಸಂಕೀರ್ತನೆಯಿಂದ ಮುಕ್ತರಾದವರು ಶತಕೋಟಿ ರಾಮಾಯಣ ಕೀರ್ತನೆಯಿಂದ ಹನುಮಂತ ದೇವರು ಭಾಗವತದ ಕೀರ್ತನೆ ಮಾಡಿದ ಶುಕಾಚಾರ್ಯರು; ಸತತ ಹರಿನಾಮ ಪಠಣದಿಂದ ನಾರದರು ಮುಕ್ತರಾಗಿದ್ದಾರೆ.

ಇನ್ನು ಕಲಿಯುಗದಲ್ಲಿಯಂತೂ ಭಕ್ತಿಯಿಂದ ಹರಿನಾಮ ಸಂಕೀರ್ತನೆಗೆ ಅನಂತ ಫಲವಿದೆ ಎಂದು ದಾಸರು ಸಾರಿ ಸಾರಿ ಹೇಳಿದ್ದಾರೆ. ಶ್ರೀ ಪುರಂದರದಾಸರು ಕೂಡ ಕಲಿಯುಗದಲ್ಲಿ ಹರಿನಾಮ ನೆನೆದರೆ ಕುಲಕೋಟಿಗಳು ಉದ್ದರಿಸುವವು.

ಇನ್ನೂ. ಮೂರನೆ ಭಕ್ತಿ. ಸ್ಮರಣ ಭಕ್ತಿ.

ಶ್ರೀವಿಷ್ಣು ಸ್ಮರಣೆಯಿಂ ಸಾಧುಸಂಸರ್ಗ
ಶ್ರೀವಿಷ್ಣು ಸ್ಮರಣೆಯಿಂಬುದೆ ಅಪವರ್ಗ
ಶ್ರೀವಿಷ್ಣು ಸ್ಮರಣೇಲಿ ಸದ್ಬುದ್ಧಿ ದೀರ್ಘಾ
ಶ್ರೀವಿಷ್ಣು ಸ್ಮರಣೆಗೆಚ್ಚರ ಬುದ ವರ್ಗ
ಶಿತಲವಾಯ್ತು ಹಲಾಹಲ ಹರಗೆ
ಮಾತೆ ದ್ರೌಪದಿ ಲಜ್ಜೆ ಕಾಯಿತು ಮರುಗೆ
ಪಾತಕಿಯ ಅಜಾಮಿಳನ ಪಾಪವು ಕರಗೆ.
ಪೂರ್ತರಾಗುವರು ಸುಜನರು ಒಳಹೊರಗೆ

ಇಲ್ಲಿ ಶ್ರೀಹರಿಯ ನಾಮಸ್ಮರಣೆ ಯಾರನ್ನು ಉದ್ಧರಿಸಿತು ಎಂಬುದನ್ನು ವರ್ಣಿಸಿದ್ದಾರೆ. ಇದರಲ್ಲಿ ಅನೇಕ ಪಾಪ ಕೃತ್ಯಗಳನ್ನು ಮಾಡಿದ ಅಜಾಯಿಳನು ಮರಣ ಕಾಲದಲ್ಲಿ ನಾರಾಯಣ ಸ್ಮರಣೆಯಿಂದ ಉದ್ರಿತನಾದ, ಹಾಲಾಹಲ ವಿಷವು ಹರನಿಗೆ ತಣ್ಣಗಾಯಿತು. ಪಾಂಚಾಲಿಯ ಲಜ್ಜೆ ಕಾಯ್ದದ್ದು ಶ್ರೀಹರಿಯನಾಮ.

---

ಶ್ರೀ ಪಸನ್ನ ವೆಂಕಟದಾಸ ಸಮಗ್ರ ಕೀರ್ತನೆಗಳು ಸಂಪುಟ–೨, ಪುಟ ಸಂ. ೧೫೩ ಕೀರ್ತನೆ ೧೩೭ (೪೦೮)

**೪) ಪಾದ ಸೇವನ ಭಕ್ತಿ**

ಶ್ರೀ ರಮಣನ ಪಾದಸೇವನ ಮಾಡಿ ಬುಧರು

ಈರ ಮತದವರು ಅನುದಿನ

ಮಹಾಲಕುಮಿ ಪಾದಸೇರೋ

ರುಹದ್ವಯವ ತೋಳಿಲಿಪ್ಪಿ

ಸ್ನೇಹವಾರ್ಧಿಯಲ್ಲಿ ಮುಳುಗಿ

ಗಾಹನದಿ ಭಜಿಸುತಿಪ್ಪ ॥

ಈ ಪದ್ಯದಲ್ಲಿ ಪರಮಾತ್ಮ ಪಾದಸೇವನೆ ಅವಶ್ಯವಾಗಿ ಮಾಡಲೇಬೇಕಾಗಿದ್ದದನ್ನು ಹೇಳಿರುತ್ತಾರೆ. ಶ್ರೀ ಲಕ್ಷ್ಮೀದೇವಿಯೇ ಶ್ರೀಹರಿಯ ಪಾದಸೇವೆಯಲ್ಲಿ ನಿರತರಾಗಿರುವಳು; ಬ್ರಹ್ಮದೇವರು ಕೂಡ ಪರಮಾತ್ಮನ ಪಾದಸೇವನೆ ಮಾಡುತ್ತಾರೆಂದ ಮೇಲೆ ನಾವು ಮಾನವರು ಅವಶ್ಯವಾಗಿ ಮಾಡುವರಾಗಿ ಧನ್ಯರಾಗಬೇಕು. ಈ ಮೆಲಿನ ಪದ್ಯದ ಅಭಿಪ್ರಾಯ. ಜ್ಞಾನಿಗಳಲ್ಲಿ, ಸಜ್ಜನರಲ್ಲಿ ಹರಿದಾಸರಲ್ಲಿ ಅನುಸಂಧಾನ ಮಾಡಿ ಅವರ ಪಾದಸೇವೆ ಮಾಡಿದರೆ ಪರಮಾತ್ಮ ಸ್ವೀಕರಿಸಿ ಭಕ್ತನ ಮೇಲೆ ಪ್ರೇರಿತನಾಗುವನು.

**೫) ಅರ್ಚನ ಭಕ್ತಿ**

ಅರ್ಚನ ಮಾಡಿರಯ್ಯ ಶ್ರೀ ಭಗವದರ್ಚನೆ ಮಾಡಿರಯ್ಯ

ಅರ್ಚನ ಮಾಡುವ ಅರ್ಚಕ ಬುದರಿಗೆ

ಅರ್ಜಿಪ ಪದದಲ್ಲಿ ಅಚ್ಯುತ ದೊರೆವನೆಂದು.

ಅಂತರಂಗ ಶುದ್ದೀಲಿ ತನ್ನಯ ಬಾ

ಹ್ಯಂತರ ಪರಿಪೂರ್ಣನ

ಚಿಂತಿಸಿ ಸರ್ವತಂತ್ರ ಶ್ರೀಹರಿ ವೇದ

ತಂತ್ರೋಕ್ತಪಥದಿ ನಿರಂತರ ಮರೆಯದೆ

---

ಶ್ರೀ ಪಸನ್ನ ವೆಂಕಟದಾಸ ಸಮಗ್ರ ಕೀರ್ತನೆಗಳು ಸಂಪುಟ–೨, ಪುಟ ಸಂ. ೧೫೪ ಕೀರ್ತನೆ ೧೭೮ (೪೦೯)

ಶ್ರೀ ಪಸನ್ನ ವೆಂಕಟದಾಸ ಸಮಗ್ರ ಕೀರ್ತನೆಗಳು ಸಂಪುಟ–೨, ಪುಟ ಸಂ. ೧೫೫ ಕೀರ್ತನೆ ೧೭೯ (೪೧೦)

ಆತ್ಮ ನಿವೇದನೆಗೆ ಐದನೆ ಮೆಟ್ಟಿಲಾದ ಅರ್ಚನ ಭಕ್ತಿಯಲ್ಲಿ ದಾಸರು ಭಗವಂತನ ಪೂಜೆಯನ್ನು ಯಾವ ವಿಧಾನದಿಂದ ಮಾಡಬೇಕೆಂಬುದನ್ನು ಒಳ್ಳೆ ವಿಸ್ತರವಾಗಿ ವರ್ಣಿಸಿದ್ದಾರೆ. ಪೃಥು ಮಹಾರಾಜ ಧ್ರುವ ಅಂಬರೀಷ ಸುಧರ್ಮಜ ಅಕ್ರೂರ ಹೇಗೆ ತಂತ್ರ ಸಾರೋಕ್ತದಿಂದ ತಮಗೆ ಇಷ್ಟವಾದ ರೂಪಗಳನ್ನು ಚಿಂತಿಸಿ ಆಹ್ವಾನಿಸಿ ಆ ದಿವ್ಯವಾದ ಮಂಗಳಕರವಾದ ಮೂರ್ತಿಯನ್ನು ಅರ್ಚನೆ ಮಾಡದಿದ್ದಾರೆಂಬುದನ್ನು ನಿರೂಪಿಸಿದ್ದಾರೆ.

**೬) ವಂದನ ಭಕ್ತಿ**

ವಂದಿಸಿದವರೆ ವಂದ್ಯರು ಪೂಜಿತರು ಮು
ಕುಂದ ಗೋವಿಂದ ಶ್ರೀಹರಿಯನ್ನು
ಎಂದೆಂದು ಕುಂದದಾನಂದ ವೈದಿಸುವ
ಇಂದಿರೆಯರಸ ಭವಬಂಧ ಮೋಚಕನ.

ಈ ಪದ್ಯದಲ್ಲಿ ದಾಸರು ಇಂದಿರೆಯರಸ ಮುಕುಂದ, ಶ್ರೀಹರಿಗೆ ಭಕ್ತಿಯಿಂದ ಒಂದು ನಮಸ್ಕಾರದಿಂದ ವಂದಿಸಿದರೆ ಸಾಕು ಎಂದೆಂದಿಗೂ ನಮ್ಮ ಆನಂದಕ್ಕೆ ಕುಂದು ಬರದಂತೆ ನೋಡಿಕೊಳ್ಳುತ್ತಾನೆ. ಮತ್ತು ಭಕ್ತಿಯಿಂದ ಸಾಷ್ಟಾಂಗ ನಮಸ್ಕಾರ ಮಾಡಿದವರಿಗೆ ಶಾಶ್ವತವಾದ ಮೋಕ್ಷ ಸುಖವು ಪ್ರಾಪ್ತವಾಗಿ ಪುನರ್ಜನ್ಮವಿಲ್ಲೆಂದು ವಿವರಿಸಿದ್ದಾರೆ.

ಶ್ರೀಹರಿಗೆ ವಂದಿಸುವಾಗ ಸರ್ವಾಂಗಗಳನ್ನು ಭೂಮಿಗೆ ಸ್ಪರ್ಶ ಮಾಡಿದಾಗ ನಮ್ಮ ಮೈಗೆ ಹತ್ತಿದ ಧೂಳೀಕರಣಗಳ ಸಹಸ್ರಾರು ಪಟ್ಟು ಪದವಿಗಳು ಶ್ರೀಹರಿಯ ದಯೆಯಿಂದ ಲಭ್ಯವಾಗುತ್ತದೆ. ಹೀಗೆ ದಾಸರು ವಂದನಾ ಭಕ್ತಿಯಿಂದ ಪ್ರಾಪ್ತವಾಗುವ ಅನಂತ ಫಲದ ವಿವರಣೆ ನೀಡಿದ್ದಾರೆ.

**೭) ಉಪಾಸನಾ ಭಕ್ತಿ (ದಾಸ್ಯ)**

ಔಪಾಸನವ ಮಾಡು ದಾಸ ನಾನೆಂದು
ಶ್ರೀಪತಿದಾಸಧರ್ಮವೆ ಮೋಕ್ಷವೆಂತೆಂದು
ವನಿತೆ ಲಕುಮಿಯು ದಾಸಿ ಮುಕ್ತಾಮುಕ್ತ
ಗಣವೆಲ್ಲ ಹರಿದಾಸರು
ಹನುಮತ್ ಸ್ವಾಮಿಯು ರಾಮದಾಸತ್ವದ ಭಾಗ್ಯ
ವನು ಹೊಂದಿ ವಿರಿಂಚಿಪದವಿಯ ಪಡೆದನು॥

---

ಶ್ರೀ ಪಸನ್ನ ವೆಂಕಟದಾಸ ಸಮಗ್ರ ಕೀರ್ತನೆಗಳು ಸಂಪುಟ–೨, ಪುಟ ಸಂ. ೧೫೭ ಕೀರ್ತನೆ ೧೪೦ (೪೧೧)

ಶ್ರೀ ಪಸನ್ನ ವೆಂಕಟದಾಸ ಸಮಗ್ರ ಕೀರ್ತನೆಗಳು ಸಂಪುಟ–೨, ಪುಟ ಸಂ. ೧೫೭ ಕೀರ್ತನೆ ೧೪೧ (೪೧೨)

ಜೀವಿಯು ತಾನು ದಾಸಾನುದಾಸನೆಂದು ತಿಳಿದು ಶ್ರೀಹರಿಯ ಉಪಾಸನೆಯನ್ನು ಮಾಡುವಲ್ಲಿ ಶ್ರೇಯಸ್ಸಿದೆ. ಶ್ರೀಲಕ್ಷ್ಮೀದೇವಿಯಿಂದ ಹಿಡಿದು ಬ್ರಹ್ಮ ವಾಯುಗಳೆಲ್ಲರೂ ಶ್ರೀಹರಿಯ ದಾಸರೆ ಶ್ರೀ ವಾಯುದೇವರು ಶ್ರೀರಾಮನ ಉಪಾಸನೆ ಮಾಡಿ ಬ್ರಹ್ಮ ಪದವಿಯನ್ನು ಪಡೆದನೆಂದ ಮೇಲೆ ಉಪಸನಾ ಭಕ್ತಿಯಿಂದ ಪಾಮರರಾದ ನಾವು ಮುಕ್ತಿ ಹೊಂದುವದರಲ್ಲಿ ಸಂಶಯವೆ ಇಲ್ಲ.

ಹೀಗೆ ಶ್ರೀಹರಿಯ ದಾಸನು ತಾನುಎಂದು ಭಾವಿಸಿ ಅವನ ಸೇವೆಯನ್ನು ಮಾಡಿದವರಿಗೆ ಶ್ರೀಹರಿಯ ಅನುಗ್ರಹದಿಂದ ನಾವು ಕಲ್ಪನೆ ಕೂಡ ಮಾಡಲಿಕ್ಕೆ ಆಗದಂಥ ಫಲ ದೊರಕುವುದು.

**೮) ಸಖ್ಯ ಭಕ್ತಿ**

ಸಖ್ಯವಿರಬೇಕು ಹರಿಭಕ್ತಜನೆ
ಮುಕ್ತಿದಾಯಕ ಪಾರ್ಥಸಖನ ಪಾದಾಬ್ಜದಲಿ
ಅನಾದ್ಯನಂತ ಕಾಲಕ್ಕೂ ಸಾಯುಜ್ಯಸಖ
ಅನಂತ ಜೀವರಿಗೆ ಬಿಂಬರೂಪ
ತಾನೆ ಜೀವರಿಗನ್ನ ಪನಿತ್ತು ಪಾಲಿಸುವ
ಪ್ರಾಣೇಶ ಹೃದ್ಗುಹ ಪ್ರಾಣಪ್ರೀಯನ.

ಈ ಪದ್ಯದಲ್ಲಿ ಶ್ರೀ ಪ್ರಸನ್ನ ವೆಂಕಟದಾಸರು ಹೇಳಿದಂತೆ ಅವಲೋಕಿಸಿದರೆ ಇಲ್ಲಿ ಶ್ರೀ ಪುರಂದರದಾಸರು ಹೇಳಿದ ಕರುಣಿಸೋ ರಂಗಾ ಪದ್ಯದಲ್ಲಿ ಬಲಿಯಂತೆ ದಾನವ ಕೊಡಲರಿಯೆ ಭಕ್ತಿಛಲವನರಿಯೇ ಪ್ರಲ್ಹಾದನಂತೆ ಒಲಿಸಲು ಅರಿಯೆ ಅರ್ಜುನನಂತೆ ಸಖನಾಗಿ.

ಎಂಬ ಪದ್ಯವು ಸ್ಮರಣೆಗೆ ಬರುತ್ತದೆ; ಅರ್ಜುನ ಶ್ರೀಕೃಷ್ಣನ ಪರಮ ಭಕ್ತನೂ ಆಗಿದ್ದ ಸಖನೂ ಆಗಿದ್ದ, ನಾವು ಅರ್ಜುನನಂತೆ ಪರಮಾತ್ಮನಿಗೆ ಸಖನಾಗಿರಬೇಕೆಂದು ಬಹು ಮಾರ್ಮಿಕವಾಗಿ ನಿರೂಪಣೆಯನ್ನು ನೀಡಿದ್ದಾರೆ.

೯) ಇನ್ನು ಕೊನೆಯದಾಗಿ ಆತ್ಮ ನಿವೇದನೆ

ಈ ಭಕ್ತಿಯು ಬಹುಶಃ ನಮಗೆ ಕಠಿಣವೆನಿಸಬಹುದು. ಇದರಲ್ಲಿ ದಾಸರು ನಾನು ನನ್ನದು ಯವುದೂ ಇಲ್ಲವೆಂದು ತಿಳಿದು ಸರ್ವಸ್ವವನ್ನು ಪರಮಾತ್ಮನಿಗೆ ಸಮರ್ಪಣೆಯನ್ನು ಮಾಡುವುದು ಎಂದು ಹೇಳಿದ್ದಾರೆ.

---

ಶ್ರೀ ಪಸನ್ನ ವೆಂಕಟದಾಸ ಸಮಗ್ರ ಕೀರ್ತನೆಗಳು ಸಂಪುಟ–೨, ಪುಟ ಸಂ. ೧೫೫ ಕೀರ್ತನೆ ೧೪೨ (೪೧೩)

### ೯) ಆತ್ಮ ನಿವೇದನೆ

ಆತ್ಮ ನಿವೇದನೆ ಭಕುತಿ ತ–

ನ್ನಾತ್ಮವನೀವ ಪರಮತ್ಮ ವಿಶ್ವಾತ್ಮಾ

ಸರ್ವ ಕರ್ಮಕರ್ತಾ ಸರ್ವಕಾಲವರ್ತಾ

ಸರ್ವಕಾರ್ಯಕ್ಕೆ ಹರಿ ಸ್ವತಂತ್ರನು

ಸರ್ವಾರ್ಥದಲಿ ಪೂರ್ಣಸರ್ವೇಂದ್ರಿಯನಿಯಂತ್ರ

ಸರ್ವದೇಶಕಾಲ ವ್ಯಾಪ್ತ ಗೋಪ್ತನೆಂದು ॥

ಈ ಪದ್ಯದಲ್ಲಿ ದಾಸರು ಪ್ರಾಣಕಪ್ಪವ ಮಾಡಿ ನಿನಗಿತ್ತ ಎಂದು ತಮ್ಮ ಕೊನೆಯ ಪದ್ಯದಲ್ಲಿ (ದಾರೋ ನೀ ಚಿನ್ನಾದಾರೊ) ಎಂಬ ಪದ್ಯದಲ್ಲಿ ಹೇಳಿದ್ದಾರೆ.

ಆದರೆ ಸಾಮಾನ್ಯ ಭಕ್ತನೊಬ್ಬನಿಗೆ ಇದು ಸಾಧ್ಯವೆ ಎಂಬ ವಿಚಾರ ಮಾಡಿದಾಗ ಸ್ವಲ್ಪ ಸಂಶಯ ಬರಬಹುದು. ನಾನು ನನ್ನದು ನನ್ನ ಮನೆ, ನನ್ನ ಸಂಸಾರ, ನನ್ನ ಸಂಪತ್ತು, ನಾನು ಸಂಪಾದನೆ ಮಾಡಿದ್ದು ಎಂಬ ಭಾವನೆ ಪ್ರತಿಯೊಬ್ಬನಲ್ಲಿಯೂ ಸಾಮಾನ್ಯವಾಗಿ ಇರುವಂಥದ್ದು. ಒಮ್ಮೆಲೆ ಎಲ್ಲವನ್ನು ನನ್ನದಲ್ಲ ಎಂದು ತಿಳಿದು ಶ್ರೀಹರಿಗೆ ಸಮರ್ಪಣೆ ಮಾಡುವುದು ಹೇಗೆ? ಆದರೆ ಶ್ರೀಹರಿಯಲ್ಲಿ ಮೊದಲಿನ ಎಂಟು ಭಕ್ತಿಗಳ ಯಶಸ್ವಿಯಾಗಿ ನಮ್ಮ ಮನಸ್ಸು ಕೇವಲ ಪರಮಾತ್ಮನಲ್ಲಿ ನಿಂತಾಗ ಜಗತ್ತಿನ ಇನ್ನಿತರ ವಸ್ತುಗಳ ಕಡೆಗೆ ಒಲವು ತಾನೆ ತಾನಾಗಿ ಕಡಿಮೆಯಾಗಿ ಕ್ರಮೇಣ ವೈರಾಗ್ಯ ಹುಟ್ಟಿದಂತೆಲ್ಲ ನನ್ನದು ಏನೂ ಇಲ್ಲವೆಂಬ ಭಾವನೆ ಬಂದು, ಸ್ವಾಮಿ ನೀನೇ ನನಗೆ ಸರ್ವಸ್ವ. ನಾನು ನಿನ್ನವ ಎಂದು ಭಕ್ತಿ ಭಾವದಿಂದ ನಿವೇದಿಸಿಕೊಂಡು ತನ್ನನ್ನೇ ಭಗವಂತನಿಗೆ ಅರ್ಪಿಸಿಕೊಳ್ಳುವದು ಆತ್ಮ ನಿವೇದನೆಯಾಗಿದೆ.

ಇನ್ನು ಪ್ರಸನ್ನ ವೆಂಕಟದಾಸರು ಬಿಡೆನೋ ನಿನ್ನಂಘ್ರಿ ಶ್ರೀನಿವಾಸ ಪದ್ಯದ ಕೆಲವು ನುಡಿಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ಬಿಡೆನೋ ನಿನ್ನಂಘ್ರಿ ಶ್ರೀನಿವಾಸ ಎನ್ನ.

ದುಡಿಸಿಕೊಳ್ಳೆಲೋ ಶ್ರೀನಿವಾಸಾ ನಿನ್ನ.

ನುಡಿಯೇ ಜೀತಲ್ಲೊ ಶ್ರೀನಿವಸಾ ನನ್ನ.

ನಡೆತಪ್ಪು ಕಾಯೋ ಶ್ರೀನಿವಸಾ ॥ ಪಲ್ಲ ॥

---

ಶ್ರೀ ಪಸನ್ನ ವೆಂಕಟದಾಸ ಸಮಗ್ರ ಕೀರ್ತನೆಗಳು ಸಂಪುಟ–೨, ಪುಟ ಸಂ. ೧೬೦ ಕೀರ್ತನೆ ೧೪೩ (೪೧೪)

ಇದು ಪ್ರಸನ್ನ ವೆಂಕಟದಾಸರ ಹೃದಯಾಂತರಾಳದಿಂದ ಹೊರಹೊಮ್ಮಿದ ಸುಂದರ ಕೀರ್ತನೆ ಇದರಲ್ಲಿ ಆತ್ಮ ನಿವೇದನೆ ಅಡಗಿದೆ. ಪ್ರಾರ್ಥನೆ ಅಡಗಿದೆ ಸ್ತೋತ್ರ ಅಡಗಿದೆ. ಇದು ಪ್ರಸನ್ನ ವೆಂಕಟದಾಸರ ಪಕ್ವ ಹೃದಯಕ್ಕೆ ಸಾಕ್ಷಿಯಾಗಿದೆ.

ದಾಸರು ಈ ಕೀರ್ತನೆಯಲ್ಲಿ ನಲವತ್ತು ಬಾರಿ ಶ್ರೀ ಶ್ರೀನಿವಾಸನ ನಾಮವನ್ನು ನುಡಿದಿದ್ದಾರೆ. ಒಂದೇ ಶಬ್ದವನ್ನು ಮತ್ತೆ ಮತ್ತೆ ಹೇಳುವುದರಿಂದ ಅದಕ್ಕೆ ಒತ್ತು ಕೊಟ್ಟಂತಾಗಿ ಅದರ ಪ್ರಾಶಸ್ತ್ಯದ ಕಡೆ ಗಮನ ಹರಿಯುತ್ತದೆ. ಇದರಿಂದ ಅದು ಅತ್ಯಂತ ಮಹತ್ವ ಪೂರ್ಣದ್ದಾಗಿದೆ.

ಬಡಿಯೋ ಬೆನ್ನಲ್ಲಿ ಶ್ರೀನಿವಾಸ ಎ–

ನ್ನೊಡಲ ಹೊಯ್ಯದಿರೋ ಶ್ರೀನಿವಾಸ ನಾ–

ಬಡವ ಕಾಣೆಲೋ ಶ್ರೀನಿವಾಸ ನಿ–

ನ್ನೊಡಲ ಹೊಕ್ಕೆನೋ ಶ್ರೀನಿವಾಸ.

ಈ ಚರಣದಲ್ಲಿ ದಾಸಾರ್ಯರು ಶ್ರೀನಿವಾಸಾ ನಾ ಮಾಡಿದ ತಪ್ಪುಗಳಿಗೆ ಶಿಕ್ಷೆಯನ್ನ ಕೊಡು. ನನ್ನ ಹೊಟ್ಟೆಯ ಮೇಲೆ ಮಾತ್ರ ಹೊಡಿಯಬೇಡ ಎಂದು ಪ್ರಾರ್ಥಿಸಿದ್ದಾರೆ.

ಬಡಿಯೋ ಬೆನ್ನಲಿ ಶ್ರೀನಿವಾಸಾ ಎಂಬ ಸಾಲು ಭಯಬಟ್ಟ ಮಗುವಿನ ಬೆನ್ನು ತಟ್ಟಿ ತಂದೆ ತಾಯಿಗಳು ಮಗುವಿನ ಭಯವನ್ನು ಓಡಿಸುವರು. ಇದರಂತೆ ಪಾಪಗಳನ್ನು ಮಾಡಿ ಅವುಗಳಿಂದ ತತ್ತರಿಸಿದ ಭಕ್ತನನ್ನು ಭಗವಂತ ಭಯ ಪಡಬೇಡ ಎಂದು ಬೆನ್ನ ಮೇಲೆ ಚಪ್ಪರಿಸುತ್ತಾನೆ ಎಂಬುದನ್ನು ವಿಶ್ಲೇಷಿಸಿದ್ದಾರೆ.

ಶ್ರೀ ಪ್ರಸನ್ನ ವೆಂಕಟದಾಸರು ಮೂರನೇ ಪಾದದಲ್ಲಿ

ನಾ ಬಡವ ಕಾಣಿಲೋ ಶ್ರೀನಿವಾಸ ಎಂದು ಹೇಳಿ ತಮ್ಮನ್ನು ಬಡವನನ್ನಾಗಿ ನಿವೇದಿಸಿಕೊಂಡಿದ್ದಾರೆ. ಭಗವಂತ ಯಾವ ವಸ್ತುಗಳನ್ನು ತನ್ನ ಸ್ವಾರ್ಥಕ್ಕಾಗಿ ಉಪಯೋಗಿಸಿಕೊಳ್ಳುವುದಿಲ್ಲ. ಎಲ್ಲವನ್ನು ಜೀವರಿಗಾಗಿ ಸೃಷ್ಟಿಸಿರುವನು. ಇದು ನಿಜವಾದ ಪ್ರಮೆಯ. ಈ ಪ್ರಮೇಯದ ಸೂಚನೆಗಾಗಿಯೆ ನಾ ಬಡವ ಕಣೆಲೋ ಶ್ರೀನಿವಾಸ ಎಂದು ಹೇಳಿರುವರು.

ಬಡವರಾದ ಜೀವಿಗಳು ಸಿರಿವಂತನಾದ ಶ್ರೀನಿವಾಸನನ್ನೇ ಆಶ್ರಯಿಸಬೇಕು. ಆಗ ಮಾತ್ರ ಸುಖಪ್ರಾಪ್ತಿ ಇದನ್ನರಿತ ಶ್ರೀ ಪ್ರಸನ್ನ ವೆಂಕಟದಾಸರು ನಿನ್ನೊಡಲು ಹೊಕ್ಕೆನೋ ಶ್ರೀನಿವಾಸ ಎಂದು ಹೆಳಿರುವರು.

ಇನ್ನು ಮುಂದಿನ ನುಡಿಗಳಲ್ಲಿ

ಪಂಜು ಹಿಡಿವೆನೋ ಶ್ರೀನಿವಾಸ । ನಿ
ನ್ನೆಂಜಲ ಬಳಿದುಂಬೆ ಶ್ರೀನಿವಾಸ ನಾ
ಸಂಜೆ ಉದಯಕೆ ಶ್ರೀನಿವಾಸ ಕಾ
ಳಂಜಿಯ ಪಿಡಿದೆ ಶ್ರೀನಿವಾಸ ॥

ಸತ್ತಿಗೆ ಚಾಮರ ಶ್ರೀನಿವಾಸ ನಾ-
ನ್ನೊತ್ತು ನಲಿವೆನೋ ಶ್ರೀನಿವಾಸ ನಿನ್ನ
ರತ್ನದ ಹಾವಿಗೆ ಶ್ರೀನಿವಾಸ ನಾ
ನೆತ್ತಿ ಕುಣಿವೆನೋ ಶ್ರೀನಿವಾಸ.

ಶ್ರೀ ಪ್ರಸನ್ನ ವೆಂಕಟದಾಸರು ಈ ಎರಡು ಚರಣಗಳಲ್ಲಿ ಬಳಸಿದ ಪಂಜು ಪ್ರಸಾದ ಕಾಳಂಜಿ ಸುತ್ತಿಗೆ ಚಾಮರ ರತ್ನದ ಹಾವಿಗೆ ಶಬ್ದಗಳು ಬಹಳೇ ಅರ್ಥಗರ್ಭಿತವಾದವುಗಳು. ಪಂಜು ಎಂದರೆ ದೀವಿಗೆ ದೀಪ. ದೀಪ ಜ್ಞಾನಕ್ಕೆ ಪ್ರತಿರೂಪ. ಭಗವಂತನನ್ನು ಜ್ಞಾನದ ಬೆಳಕಿನಲ್ಲಿ ಕಾಣಬೇಕು. ಜ್ಞಾನವಿಲ್ಲದ ವ್ಯಕ್ತಿಯಲ್ಲಿ ವೈರಾಗ್ಯ, ಭಕ್ತಿಗಳು ಉದಯಿಸಲಾರವು. ಭಗವದ್ದರ್ಶನಕ್ಕೆ ಜ್ಞಾನ ಸಹಿತವಾದ ಭಕ್ತಿಯೇ ಮುಖ್ಯ ಕಾರಣ. ಅರ್ಥದಲ್ಲಿ ಶ್ರೀ ಪ್ರಸನ್ನ ವೆಂಕಟದಾಸರು ಹೇ ಶ್ರೀನಿವಾಸ ನಿನ್ನ ಜ್ಞಾನದ ಪಂಜನ್ನು ಹಿಡಿಯುತ್ತೇನೆ ನಿನ್ನ ವಿಷಯಗುಣದ ಶ್ರುತಿ-ಸ್ಮೃತಿ ಪುರಾಣ. ವೇದಾಂತ ಗ್ರಂಥಗಳಿಂದ ಕಂಡುಬರುವ ಶುದ್ಧ ಜ್ಞಾನ ಮಾರ್ಗದಲ್ಲಿ ನಡೆದು ಧನ್ಯನಾಗುತ್ತೇನೆ ಎಂದಿದ್ದಾರೆ ದಾಸರು. ದಾಸರು ಬಳಸಿದ ಎಂಜಲು ಶಬ್ದಕ್ಕೆ ಪ್ರಸಾದ ಎಂದು ಅರ್ಥ ಭಗವಂತನಿಂದ ದೊರೆಯುವ ರೋಗ-ಭೂ-ಐಶ್ವರ್ಯ-ದಾರಿದ್ರ್ಯ-ಸುಖ-ದುಃಖಗಳೆಲ್ಲವೂ ನಿಜವಾದ ಅರ್ಥದಲ್ಲಿ ಅವನ ಪ್ರಸಾದಗಳೇ.

ನಿನ್ನವ ನಿನ್ನವ ಶ್ರೀನಿವಾಸ ನಾ
ನನ್ನವ ನರಿಯೆನೋ ಶ್ರೀನಿವಾಸ ಅಯ್ಯ.
ಮನ್ನಿಸೊ ತಾಯ್ತಂದೆ ಶ್ರೀನಿವಾಸ ಪ್ರ
ಸನ್ನ ವೆಂಕಟಾದ್ರಿ ಶ್ರೀನಿವಾಸ.

ಈ ಕೊನೆಯ ಚರಣ ಪ್ರಸನ್ನ ವೆಂಕಟದಾಸರ ಆತ್ಮ ನಿವೇದನೆ ಭಕ್ತಿಗೆ ದೃಷ್ಟಾಂತ ಈ ಚರಣದಲ್ಲಿ ದಾಸರು ತಮ್ಮನ್ನು ತಾವು ಶ್ರೀನಿವಾಸ ಚರಣಗಳಿಗೆ ಸಮರ್ಪಿಸಿಕೊಂಡಿರುವರು. ದಾಸರು ಭಗವಂತನನ್ನು ಕುರಿತು ಶ್ರೀನಿವಾಸ ನಾನು ಒಂದು ಅರಿಯದ ಮಂದಮತಿ. ನನಗೆ ತಿಳಿದಿರುವುದು ಒಂದೆ ನಾನು

ನಿನ್ನವನು. ನಾನು ಎನ್ನುವವನು. ನಿನ್ನ ಹೊರತು ಅನ್ಯಗತಿ ನಾಕಾಣೆ. ನನ್ನ ಪಾಲಿನ ಮಾತಾ–ಪಿತ ಬ್ರಾತ–ಬಾಂಧವ ದೂತ–ಗುರು ನಾಥ ಗತಿ ನೆಲೆ ನೀತ ಸಖ ಎಲ್ಲವೂ ನೀನೇ ಪ್ರಸನ್ನ ವೆಂಕಟಾಧಿನಾಥ ಶ್ರೀನಿವಾಸಾ ಮನ್ನಿಸಿ ಸಂರಕ್ಷಿಸು ನೀನೇ ನನ್ನವನೆಂಬ ಸಮೃದ್ಧಿಯನ್ನು ಸದಾ ಕರುಣಿಸು.

ಹೀಗೆ ಭಕ್ತರು ಆತ್ಮ ನಿವೇದನೆ ಮಾಡಿಕೊಂಡ ಸರ್ವವು ಹರಿಮಯ. ಸರ್ವವು ಹರಿಸಮ್ಮತ ಎಂದು ಭಕ್ತಿ ಮಾರ್ಗದಲ್ಲಿ ಪರಿಪಕ್ವವಾದಾಗ ಸಮಾನ್ಯವಾಗಿ ಎಲ್ಲ ಹರಿದಾಸರಲ್ಲೂ ಅವರವರಪರೋಕ್ಷಾಮಭೂತಿಯ ಅಭಿವ್ಯಕ್ತಿಯನ್ನು ಕಾಣಬಹುದು.

**ಶ್ರೀಕೃಷ್ಣಾರ್ಪಣಮಸ್ತು.**